# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

₹ 5/-

Nesaru Tingalole Vol XXXIII - 10 October 2015

PAGES 16



ಅಸೋಸಿಯೇಶನ್‌ನಲ್ಲಿ ಗೌರಿ ಗಣೇಶ ಹಬ್ಬದ ಸಂಭ್ರಮದ ಆಚರಣೆ

**The Mysore Association, Bombay**

393, Bhau Daji Road, Matunga, Mumbai - 400 019.

Tel.: 2402 4647, 2403 7065 • Fax : 2401 0574

Email : mysoreassociation.mumbai@gmail.com

# ಅಸೋಸಿಯೇಶನ್‌ನಲ್ಲಿ ಗೌರಿ ಗಣೇಶ ಮಹೋತ್ಸವ ಆಚರಣೆ



ಇದೇ ಸೆಪ್ಟೆಂಬರ್ ತಿಂಗಳ 16ರಂದು ಸ್ವರ್ಣಗೌರಿ ಪೂಜೆ ಮತ್ತು ಸೆಪ್ಟೆಂಬರ್ 17ರಂದು ವರಸಿದ್ಧಿ ವಿನಾಯಕ ಸ್ವಾಮಿಯವರ ಪೂಜಾ ವಿಧಿಗಳನ್ನು ಮೈಸೂರು ಅಸೋಸಿಯೇಶನ್‌ನಲ್ಲಿ ನೆರವೇರಿಸಲಾಯ್ತು.

ಸೆಪ್ಟೆಂಬರ್ 16ರಂದು ಬುಧವಾರ ಹೆಂಗಳೆಯರೆಲ್ಲ ಸೇರಿ ಶ್ರೀ. ಛಾಯಾ ನಾಗರಾಜ್ ಮತ್ತು ಶ್ರೀಮತಿ ಸೌಮ್ಯ ಪ್ರಸಾದ್ ಅವರ ನೇತೃತ್ವದಲ್ಲಿ ಸ್ವರ್ಣಗೌರಿಯನ್ನು



ಚೆನ್ನಾಗಿ ಅಲಂಕರಿಸಿದ ಮಂಟಪದಲ್ಲಿಟ್ಟು ಪುರೋಹಿತರ ಮಂತ್ರಘೋಷಗಳ ಸಹಕಾರದಲ್ಲಿ ವಿಧ್ಯುಕ್ತವಾಗಿ ಸ್ಥಾಪಿಸಿ ಪೂಜಾ ಕಾರ್ಯವನ್ನು ನೆರವೇರಿಸಿದರು. ಎಲ್ಲ ಭಕ್ತಾದಿಗಳಿಗೆ ಪ್ರಸಾದ ವಿತರಣೆಯಾಯ್ತು.

ಸೆಪ್ಟೆಂಬರ್ 17ರಂದು ಗುರುವಾರ ವರಸಿದ್ಧಿ ವಿನಾಯಕಸ್ವಾಮಿಯ ಪೂಜಾ ವಿಧಿಗಳನ್ನು ಶ್ರೀಮತಿ ಸುಧಾ ಮತ್ತು ಶ್ರೀ. ಶ್ರೀನಿವಾಸ್ ದಂಪತಿ ನೆರವೇರಿಸಿಕೊಟ್ಟರು. ಜೊತೆಗೆ ಶ್ರೀಮತಿ ಜ್ಯೋತಿ ಮತ್ತು ಶ್ರೀ. ಕುಮಾರ್ ದಂಪತಿ ಕೂಡ ಇದ್ದರು. ಮಂಗಳಾರತಿಯ ನಂತರ ಪ್ರಸಾದ ವಿನಿಯೋಗವಾಯ್ತು.

ಗೌರಿ ಗಣೇಶ ಮಹೋತ್ಸವದ ಪ್ರಯುಕ್ತ ಸೆಪ್ಟೆಂಬರ್ 18 ಮತ್ತು ಸೆಪ್ಟೆಂಬರ್ 19 ಎರಡು ದಿನಗಳು ಉದಯೋನ್ಮುಖ ಕಲಾವಿದರಾದ, ಸಂಗೀತ ಸ್ಪರ್ಧೆಯ ವಿಜೇತರ ಹಾಡುಗಾರಿಕೆಯ ಕಾರ್ಯಕ್ರಮವಿತ್ತು.

ಸೆಪ್ಟೆಂಬರ್ 18 ರಂದು ಹಿರಿಯ ವಯೋಮಿತಿಯ ಘಟಕದಲ್ಲಿ ದೇವರನಾಮ ಸ್ಪರ್ಧೆಯಲ್ಲಿ ವಿಜೇತರಾದ ಕುಮಾರಿ ಸುರಭಿ ಮತ್ತು ಕುಮಾರಿ ಮಾಧುರಿ ಇವರ ಗಾಯನ ಕಾರ್ಯಕ್ರಮ ನಡೆಯಿತು.

ಅದಕ್ಕೂ ಮೊದಲು ಮಹಿಳೆಯರ ಅರಿಷಿನ ಕುಂಕುಮ ಪ್ರದಾನ ಕಾರ್ಯಮವಿತ್ತು.

ಸೆಪ್ಟೆಂಬರ್ 19 ರಂದು ಹಿರಿ ಕಿರಿಯ ಎರಡೂ ಘಟಕಗಳಲ್ಲಿ ವಿಜೇತರಾದವರಿಗೆ ಅವಕಾಶ ಕೊಡಲಾಗಿತ್ತು. ಕುಮಾರಿ ವಿಶಾಲಾಕ್ಷಿ ಮತ್ತು ಕುಮಾರ್ ಶ್ರೀವತ್ಸನ್ ಇವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತದ ಕಾರ್ಯಕ್ರಮ ಪ್ರಸ್ತುತವಾಯ್ತು.

ಈ ಎರಡೂ ದಿನಗಳ ಕಾರ್ಯಕ್ರಮಗಳನ್ನು ಶ್ರೀಮತಿ. ಲಕ್ಷ್ಮೀ ಸೀತಾರಾಮ್ ಅವರು ಬಹಳ ಉತ್ಸಾಹದಿಂದ ನಡೆಸಿಕೊಟ್ಟರು.



ಕೊನೆಯದಾಗಿ ಸೆಪ್ಟೆಂಬರ್ 20 ರಂದು ಗೌರಿ ಗಣೇಶ ವಿಸರ್ಜನಾ ಕಾರ್ಯಕ್ರಮವಿತ್ತು. ಮೊದಲು ನವಗ್ರಹ ಪೂಜೆಯಾದ ನಂತರ ಋತ್ವಿಕರಿಂದ ವೇದಘೋಷ ರುದ್ರ ಪಠಣವಾಯ್ತು. ನಂತರ ಸಾಮೂಹಿಕವಾಗಿಯೂ, ಏಕಧ್ವನಿಯಾಗಿಯೂ ಹಿರಿ ಕಿರಿಯರೆಲ್ಲರಿಂದಲೂ ದೇವರಿಗೆ ಸಂಗೀತ ಸೇವೆಯಾಯ್ತು. ಶ್ರೀಮತಿ ಸುಧಾ ಶ್ರೀನಿವಾಸ್ ಅವರ ಕಿರಿಯ ಶಿಷ್ಯೆ ಕುಮಾರಿ ಸ್ನೇಹಳಿಂದ



(ಪುಟ 16ಕ್ಕೆ)

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

## ಸಂಪಾದಕೀಯ

# ನೇಸರು
## ತಿಂಗಳೋಲೆ

**ಸಂಪುಟ 33** **ಅಕ್ಟೋಬರ್ 2015** **ಸಂಚಿಕೆ 10**

"ಕಾಣದ ಕಡಲಿಗೆ ಹಂಬಲಿಸಿದೆ ಮನ
ಕಾಣಬಲ್ಲೆನೆ ಒಂದು ದಿನ ಕಡಲೊಳು
ಕೂಡಬಲ್ಲೆನೆ ಒಂದು ದಿನ" – **ಡಾ. ಜಿ. ಎಸ್. ಶಿವರುದ್ರಪ್ಪ**

ಕನ್ನಡದ ರಾಷ್ಟ್ರಕವಿ ಡಾ. ಜಿ. ಎಸ್. ಎಸ್ ರವರ ಈ ಮೇಲಿನ ಕವಿತೆ ನಮಗೆಲ್ಲರಿಗೂ ತಿಳಿದಿರತಕ್ಕದ್ದೆ. ಈ ಜಗತ್ತಿನ ಪ್ರತಿಯೊಬ್ಬ ಮನುಷ್ಯನು ಈ ವಿಶಾಲವಾದ ಜೀವನವೆಂಬ ಕಡಲನ್ನು ಈಜಲು ಎಷ್ಟೊಂದು ಹರ ಸಾಹಸ ಪಡುತ್ತಿದ್ದಾನೆ. ಕಡಲನ್ನೂ ಮೀರಿ, ಬದುಕನ್ನು ನಡೆಸಿದ ಅನೇಕರ ಆದರ್ಶಗಳು ನಮ್ಮ ನಡುವೆ ಇದೆ. ಬದುಕಿನ ಬಗ್ಗೆ ಅವರಿಗಿರುವ ಅನುಭವಗಳು ನಮಗೆ ಹೆದ್ದಾರಿಯಾಗಿವೆ ಅನ್ನೋದನ್ನು ನಾವು ಮರೆಯುವ ಹಾಗಿಲ್ಲ. ಆದರೂ ಅದಕ್ಕೇ ಜೋತುಬೀಳದೆ ಮತ್ತೊಮ್ಮೆ ಬದುಕಿನ ಹೊಸ ವೈವಿಧ್ಯತೆಯ ಕಡೆ ಮುಖಮಾಡುವುದು ಬಹುಶಃ ಸ್ವಯಂಸ್ಫೂರ್ತಿಯ ಬದುಕಿಗೆ ನಾಂದಿ ಹಾಡಿದಂತೆ.

ಮಾನವನದು ಸಂಘರ್ಷಮಯ ಬದುಕು. ಅವನು ಹುಟ್ಟಿನಿಂದ ಹಿಡಿದು ಮಣ್ಣು ಸೇರುವ ತನಕ ಒಂದಲ್ಲ ಒಂದು ಕಾರಣಕ್ಕಾಗಿ ಬದುಕಿನೊಂದಿಗೆ ಹೋರಾಟ ಮಾಡುತ್ತಲೇ ಬಂದಿದ್ದಾನೆ. ಮಾನವನ ಬದುಕೇ ಒಂದು ಹೋರಾಟ. ನಮ್ಮ ಬದುಕು, ಬದುಕಿನ ಎಲ್ಲ ಸೂತ್ರಗಳಿಗಿಂತ ಹಿರಿಯದು. ಬದುಕಿನ ಎಲ್ಲ ಸೂತ್ರಗಳನ್ನು ಮೀರಿ ಬದುಕಿನ ಹಿತವನ್ನು ಹುಡುಕುವುದೇ ನಿಜವಾದ ಬದುಕು. ಮನುಷ್ಯನ ಬದುಕು ನಿಂತ ನೀರಾಗಬಾರದು. ಅದು ಚಲನಶೀಲವಾಗಿರಬೇಕು. ಪ್ರವಾಹದಿಂದ ಉಕ್ಕಿ ಹರಿಯುವ ನದಿ ತನ್ನ ಎರಡು ದಡಗಳ ಎಲ್ಲೆಯೊಳಗೇ ಹರಿಯುವುದಿಲ್ಲ. ರಭಸದಿಂದ ಎಲ್ಲೆ ಮೀರಿ ಹರಿದು ತಾನು ಸೇರಬೇಕಾದ ಸ್ಥಳವನ್ನು ಕೂಡಿಕೊಳ್ಳುತ್ತದೆ. ಅದು ನದಿಯ ಹರಿವಿನ ಸ್ವಭಾವ. ಪ್ರಕೃತಿಗೆ ಹಾನಿಯಾಗುತ್ತದೆಂದು ನದಿ ತನ್ನ ಹರಿವ ದಿಕ್ಕನ್ನಾಗಲಿ, ಗತಿಯನ್ನಾಗಲೀ ಬದಲಿಸುವುದಿಲ್ಲ. ಹಾಗೆ ಬದಲಾಯಿಸಿದರೆ ಅದು ತನ್ನ ಗುರಿಯನ್ನು ಮುಟ್ಟಲು ಸಾಧ್ಯವಿಲ್ಲ. ಮನುಷ್ಯನ ಬದುಕಿನ ಗುರಿ ಹಾಗಿರಬೇಕು.

ಮನುಷ್ಯನಿಗೆ ತನ್ನ ಬದುಕಿನ ಗುರಿ ಬಗ್ಗೆ ದೃಢ ನಂಬಿಕೆಯಿರಬೇಕು. ಯೋಗ್ಯವಲ್ಲದ ಮಾರ್ಗದಲ್ಲಿ ಎಷ್ಟು ವೇಗವಾಗಿ ಓಡಿದರೂ ಪ್ರಯೋಜನವಿಲ್ಲ. ಬದುಕಿನಲ್ಲಿ ನಾವು ಕೇವಲ ಗೆಲ್ಲುವುದಕ್ಕಾಗಿ ಹೋರಾಡಬಾರದು. ಜೀವನದ ಮೌಲ್ಯಗಳನ್ನು ವೃದ್ಧಿಸಿಕೊಂಡ ಗೆಲುವೇ ನಿಜವಾದ ಗೆಲುವು. ಸತ್ಪ್ರಯತ್ನಕ್ಕೆ ಫಲ ಸಿಕ್ಕೇ ಸಿಗುತ್ತದೆ. ನಮ್ಮ ಅಲೋಚನೆ, ನಮ್ಮ ನುಡಿ ಮತ್ತು ನಮ್ಮ ನಡೆ ಸಮನ್ವಯಗೊಂಡಾಗ ನಮಗೆ ನಿಜವಾದ ಬದುಕಿನ ಆನಂದದ ಅನುಭವವಾಗುತ್ತದೆ. ನಮ್ಮ ಜೀವನದಲ್ಲಿ ಮುಂದೆ ಒಳ್ಳೆಯ ದಿನಗಳು ಬರುತ್ತವೆ ಎನ್ನುವ ಆಶಾಭಾವನೆಯೇ ನಮ್ಮ ಇಂದಿನ ದಿನವನ್ನು ಸುಂದರವಾಗಿಸುತ್ತವೆ. ನಾವು ಎಷ್ಟು ಕಷ್ಟಪಟ್ಟು ದುಡಿದರೂ ಜೀವನದಲ್ಲಿ ಬರುವ ಸೋಲನ್ನು ನಾವು ಒಪ್ಪಿಕೊಳ್ಳಬೇಕು. ಏಕೆಂದರೆ ಈ ಸೋಲೇ ನಮ್ಮ ಭಾವೀ ಜೀವನದ ತಳಹದಿಯಾಗುತ್ತದೆ. ಪ್ರತಿಯೊಂದು ದಿನವೂ ನಮಗೆ ಬದುಕಿನ ಹೊಸ ಹೊಸ ಪಾಠವನ್ನು ಕಲಿಸುತ್ತಿರುತ್ತದೆ. ಸಕರಾತ್ಮಕ ಚಿಂತನೆಗೆ ನಮ್ಮನ್ನು ಆಗಾಗ ಒಡ್ಡಿಕೊಳ್ಳಬೇಕು. 'ಯಾರು ಆಸೆಗೆ ದಾಸರೋ ಅವರು ಸಕಲ ಲೋಕಕ್ಕೂ ದಾಸರೇ. ಯಾರಿಗೆ ಆಸೆಯೇ ದಾಸಿಯಾಗಿರುತ್ತದೆಯೋ ಅವರಿಗೆ ಲೋಕವೇ ದಾಸವಾಗುತ್ತದೆ ಎಂಬ ನಾಣ್ಣುಡಿಯನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು.

ಬದುಕಿಗಾರ್ ನಾಯಕರು, ಏಕನೋ ಅನೇಕರೋ?
ವಿಧಿಯೋ ಪೌರುಷವೋ ಧರುಮವೋ ಅಂಧಬಲವೋ?
ಕುದುರುವುದೆಂತು ಈ ವ್ಯವಸ್ಥೆಯ ಪಾಡು?
ಅದಿಗುದಿಯೆ ಗತಿಯೇನೋ?

**–ಮಂಕುತಿಮ್ಮ**

ಈ ಬದುಕಿಗೆ ಯಾರು ನಾಯಕರು? ಒಬ್ಬನೋ ಅಥವಾ ಅನೇಕರಿದ್ದಾರೆಯೋ? ಅಥವಾ ಈ ಬದುಕಿಗೆ ನಾಯಕ, ವಿಧಿಯೋ, ಧರ್ಮವೋ ಅಥವಾ ಅಂಧ ಶ್ರದ್ಧೆಯೋ? ನಾವು ಯಾವಾಗಲೂ ಇವೆಲ್ಲದರ ವಿಚಾರಮಂಥನದಲ್ಲಿಯೇ ನಮ್ಮ ಸಮಯವನ್ನು ಕಳೆಯಬೇಕೇ? ಇಂಥಹ ಒಂದು ಯೋಚನೆಯನ್ನು ಡಿವಿಜಿಯವರು ಓದುಗರ ಮುಂದಿಟ್ಟಿರುವುದನ್ನು ನೋಡಬಹುದು.

ಡಾ. ಶಿವರಾಮ ಕಾರಂತರ ಪ್ರಕಾರ "ಯಾವೊಬ್ಬ ವ್ಯಕ್ತಿಯು ಶ್ರೇಷ್ಠನಲ್ಲ, ಅದಕ್ಕೆ ಕಾರಣವೆಂದರೆ ಒಬ್ಬ ವ್ಯಕ್ತಿ ತಾನು ಇಡೀ ಮನುಕುಲದೊಂದಿಗೆ ಮಾತ್ರವಲ್ಲ, ಇಡೀ ಜೀವಸಂಕುಲದೊಂದಿಗೆ ಈ ಬ್ರಹ್ಮಾಂಡದಲ್ಲಿ ಬಾಳಬೇಕು. ಒಂದು ಜೀವ ಘಟಕವಾದ ಮನುಷ್ಯ ತನ್ನನ್ನು ಇಡೀ ಬ್ರಹ್ಮಾಂಡದೊಂದಿಗೆ ಸಮೀಕರಿಸಿ ನೋಡಿದಾಗ ಮಾತ್ರ ತನ್ನ ಮಿತಿಯನ್ನು ಅರಿತುಕೊಳ್ಳುತ್ತಾನೆ. ತಾನು ಬದುಕಿಗೆ ನೀಡುವುದಕ್ಕಿಂತ ಬದುಕು ತನಗೆ ನೀಡಿದ್ದು ಹೆಚ್ಚು ಎಂದು ತಿಳಿದುಕೊಳ್ಳುತ್ತಾನೆ. ಇದರಿಂದ ಅವನಲ್ಲಿ ಕೀಳರಿಮೆ ಮೂಡಬೇಕಿಲ್ಲ; ವಿನೀತಭಾವ ಬೆಳೆಯಬೇಕು" ಇದು ಮಾನವನ ಬದುಕಿನ ಬಗ್ಗೆ ಕಾರಂತರ ನಿಲುವು. ಹೌದು, ಎಲ್ಲವನ್ನು ತಿಳಿಯುವಲ್ಲಿ, ಹಂಚಿಕೊಳ್ಳುವುದರಲ್ಲಿ ಬದುಕು ಇನ್ನಷ್ಟು ಸಮೃದ್ಧವಾಗುತ್ತದೆ. ಒಂದು ಮರ ತಾನಾಗಿ ಬೆಳೆಯುತ್ತದೆ. ಆ ರೀತಿ ಮನುಷ್ಯ ಬೆಳೆಯಲಾರ. ನಮ್ಮ ಬದುಕು ಆರಂಭವಾಗುವುದಕ್ಕೆ ಸಾವಿರಾರು ವರ್ಷಗಳ ಮೊದಲೇ ಜೀವರಾಶಿ ಇಲ್ಲಿತ್ತು ಎನ್ನುವುದನ್ನು ತಿಳಿದುಕೊಂಡರೆ ಸಾಕು...

**– ಡಾ. ಜ್ಯೋತಿ ಸತೀಶ್**

# ವಿದ್ವಾನ್ ವೀಣಾ ವೆಂಕಟಗಿರಿಯಪ್ಪ
## (ವೀಣಾ ವಿದ್ವಾಂಸರು)

ದಿನಾಂಕ 26.04.1887 ರಂದು ಹೆಗ್ಗಡೆದೇವನ ಕೋಟೆಯಲ್ಲಿ ವೀಣಾ



ವೆಂಕಟಗಿರಿಯಪ್ಪನವರು ತಂದೆ ವೆಂಕಟರಾಮಯ್ಯ ಮತ್ತು ತಾಯಿ ನರಸಮ್ಮನವರ ಸುಪುತ್ರರಾಗಿ ಜನಿಸಿದರು. ವೈದೀಕ ಮನೆತನ. ಹನ್ನೊಂದು ತಿಂಗಳ ಮಗುವನ್ನು ಬಿಟ್ಟು ತಂದೆ ವಿಧಿವಶರಾದರು. ತಾಯಿ ನರಸಮ್ಮ ಅವರ ತಂದೆಯವರಾದ ಮೈಸೂರಿನ ನಿವಾಸಿ ದೊಡ್ಡ ಸುಬ್ಬರಾಯರ ಆಶ್ರಯ ಪಡೆದರು. ದೊಡ್ಡ ಸುಬ್ಬರಾಯರಾದರೂ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಪ್ರಮುಖ ವಿದ್ವಾಂಸರಾಗಿದ್ದರು. ದೊಡ್ಡ ಸುಬ್ಬರಾಯರ ಮಗ ಚಿಕ್ಕಸುಬ್ಬರಾಯರು ಸಹ ಅದ್ವಿತೀಯ ಕಲಾವಿದರು. ವೀಣಾ ವೆಂಕಟಗಿರಿಯಪ್ಪನವರು ಚಿಕ್ಕಸುಬ್ಬರಾಯರಲ್ಲಿ ಸಂಗೀತ ಅಭ್ಯಾಸದಲ್ಲಿ ತೊಡಗಿದರು. ಅನವರತ ಪರಿಶ್ರಮದಿಂದ ಸಂಗೀತದಲ್ಲಿ ಅಪೂರ್ವ ಸಾಧನೆಗೈದು ವಿದ್ವಾಂಸರಾದರು.

ಅಂದಿನ ಮಹಾರಾಜರು ಸ್ವತಃ ಕಲಾವಿದರೇ ಅಲ್ಲದೇ ಮಹಾರಸಿಕರೂ ಆಗಿದ್ದರು. ಇಂಥಾ ಹಿರಿಯ ಚೇತನ ವೀಣಾ ವೆಂಕಟಗಿರಿಯಪ್ಪನವರ ಪರಮಾಪ್ತರಾಗಿದ್ದರು. ವೀಣೆ ಶೇಷಣ್ಣನವರ ಸಾನ್ನಿಧ್ಯ ದೊರೆತು ಅವರ ಬಾನಿ ಇವರಲ್ಲೂ ಮೂಡಿ ಬರುವಂತಾಯಿತು. ಅಪೂರ್ವ ಸಾಧನೆಯಿಂದ ಶೇಷಣ್ಣನವರ ಮೆಚ್ಚುಗೆ ಗಳಿಸಿದರು. ಮಹಾರಾಜರ ಅನುಗ್ರಹಕ್ಕೆ ಪಾತ್ರರಾದ ಇವರು ಮಹಾರಾಜರ ಪುತ್ರಿಯರಿಗೂ ವಿದ್ಯಾದಾನ ಮಾಡುವ ಅವಕಾಶ ಲಭಿಸಿತು.

ವೆಂಕಟಗಿರಿಯಪ್ಪನವರು ವಾಗ್ಗೇಯಕಾರರಾಗಿಯೂ ತಮ್ಮ ಸಾಹಿತ್ಯದ ಸಾಧನೆಯನ್ನೂ ಹೊರಸೂಸಿದ್ದಾರೆ. ಅನೇಕ ವರ್ಣಗಳು, ತಿಲ್ಲಾನಗಳು, ರಾಗಮಾಲಿಕೆಗಳೊಂದಿಗೆ ಕನ್ನಡ ಕೃತಿಗಳನ್ನೂ ರಚಿಸಿದ್ದಾರೆ. ಸರಳ ಹೃದಯಿ, ಈರ್ಷೆ ಎನ್ನುವುದು ಇವರ ಕಡೆ ಸುಳಿಯಲಿಲ್ಲ. ಕಲಾವಿದನಿಗಿರಬೇಕಾದ ಅಹಂ ಇವರಲ್ಲಿ ಮನೆ ಮಾಡಲಿಲ್ಲ. ಉತ್ತಮ ಗಾಯನವನ್ನೋ, ವಾದನವನ್ನೋ ಕೇಳಿದರೆ ಹೃದಯ ತುಂಬಿ ಕೈಯಲ್ಲಿದ್ದ ಉಂಗುರವನ್ನೋ, ಕತ್ತಿನಲ್ಲಿದ್ದ ಸರವನ್ನೋ ಆ ಕಲಾವಿದನಿಗೆ ಬಹುಮಾನವಾಗಿ ನೀಡುವ ಹೃದಯ ಶ್ರೀಮಂತಿಕೆ ಇವರದಾಗಿತ್ತು. ಇವರ ಶಿಷ್ಯ ಪರಂಪರೆಯಲ್ಲಿ ಪ್ರಸಿದ್ಧಿಗೆ ಬಂದವರು ವೀಣಾ ದೊರೆಸ್ವಾಮಿ ಅಯ್ಯಂಗಾರ್, ಆರ್.ಎನ್.ದೊರೆಸ್ವಾಮಿ, ಎಂ.ಚಲುವರಾಯಸ್ವಾಮಿ, ಎಂ.ಜೆ.ಶ್ರೀನಿವಾಸ ಅಯ್ಯಂಗಾರ್ ಮುಂತಾದವರು. ಸಂಗೀತ ಕ್ಷೇತ್ರದಲ್ಲಿ ಅಪೂರ್ವ ಸಾಧನೆಗೈದಿದ್ದ ಇವರಿಗೆ ಸಂಸಾರದಲ್ಲಿ ನೋವು ಕಂಡಿತ್ತು. ಮಗನ ಅಕಾಲಿಕ ಮರಣ ಇವರಿಗೆ ಆಘಾತವುಂಟು ಮಾಡಿತ್ತು.

ನೋವು-ನಲಿವಿನ ಮಧ್ಯೆ ದಿನಾಂಕ 30-01-1952 ರಂದು ಇವರ ಆತ್ಮ ಪರಮಾತ್ಮನಲ್ಲಿ ಲೀನವಾಯಿತು.

---

# ಬಾಳು ಬಂಗಾರವಾಗುವುದು

ಭೂಮಿ ತಾಯಿಯಿಂದ
ಶಕ್ತಿಯನು ಹೀರುತಲಿ
ನೀರನೂ ಪಡೆಯುತಲೆ
ಬೆಳೆದ ಮರದ ಪರಿಯ
ಕಂಡು ಅನುಸರಿಸುತ
ಮರವು ಪಡೆದ ಕಷ್ಟ
ಪರಂಪರೆಯ ಮರೆತು
ನವೀನಸನೆಗೆ ತಾನು
ರಕ್ಷೆ ನೀಡಿ ಚೈತನ್ಯಕೊಟ್ಟು
ಸ್ವಾರ್ಥ ತ್ಯಜಿಸದೆಯ
ಪರೋರಕಾರ ಇದಂ
ಶರೀರಂ ಎಂದು ಪಕ್ಷಿ
ಸಂಕುಲಕ್ಕೆಲ್ಲ ವಾಸಿಸಲು ಕೊಟ್ಟು
ಕಪಿಗಳಿಗೆ ನೆಲೆನಿಂತು
ತಿಂದೊರಗಲು ಸ್ಥಳವಕೊಟ್ಟು
ನೆರಳ ಅರಸಿ ಬಂದ ಜನಕೆ
ನೆರಳ ತಂಪಕೊಡುತಲಿ
ನೆರಳ ಕುಳಿತವನಿಗೊಂದು
ಹಣ್ಣು ಕಾಣಿಕೆ ಕೊಡ ಕೊಡುತಲಿ
ವಿಸ್ತಾರವಾಗಿ ಬೆಳೆದು ನೀನು
ಸಹಾಯ ಹಸ್ತ ಚಾಚುವೆ
ನಿನ್ನ ಕಂಡು ನಾವು ಜನರು
ಬಾಯಾರಿದವರಿಗೆ ನೀರು
ಹಸಿದವರಿಗೆ ಅನ್ನದೂಟ
ಸ್ಥಳವಿಲ್ಲದವಗೆ ಮಲಗಲು
ಮನೆಯ ಕಟ್ಟಿಕೊಟ್ಟು
ನೊಂದವರಿಗೆ ಅನುಕಂಪ
ಸೋತವನ ಸಹಾಯಕೆ
ನೀ ಕೈ ಕೊಡಬಾರೆಯಾ
ಸಾದನೆಯ ಹಾದಿ ಹಿಡಿದು
ತಾನು ಬಾಳಿ ಇತರರ
ಬಾಳಿಸುತ ನೆಮ್ಮದಿ
ಬಾಳು ಪಡೆದರೆ
ನಿಜವಾಗಿ ನಮ್ಮ ಬಾಳು ಬಂಗಾರ

**– ಡಾ. ಜಿ. ಡಿ. ಜೋಶಿ**

# 'ಪಂಪಭಾರತ'ದ ರಾಜನೀತಿ

ಪಂಪ ಮಹಾಭಾರತದ ಕಥೆಗೆ ಸಮಕಾಲೀನ ಜೀವನ ದೃಷ್ಟಿ ಕೊಟ್ಟು, ಪಾತ್ರಗಳಲ್ಲಿ down to earth ಸ್ವಭಾವಗಳನ್ನು ತುಂಬಿ ಹೆಚ್ಚು ಲೋಕಪ್ರಿಯಗೊಳಿಸಿದ ತನ್ನ ಕಾಲದ ಇತಿಹಾಸದ ಹಿನ್ನೆಲೆಯಲ್ಲಿ ಮಹಾಭಾರತವನ್ನು ಬಣ್ಣಿಸಿದ. ತನ್ನ ಆಶ್ರಯದಾತ ಮಿತ್ರನನ್ನು ಅನನ್ಯವಾಗಿ ಹೊಗಳಿ ಕಾವ್ಯ ರಚನೆಯ ಒಂದು ಹೊಸ ಸಂಪ್ರದಾಯದ ನಿರ್ಮಾಣ ಮಾಡಿದ. ಮುಂದೆ ಇದು ರನ್ನನಿಗೂ ಆದರ್ಶವಾಯಿತು. ಹಿತ- ಮಿತ ಮೃದು ವಚನದಲ್ಲಿ ಗಾಂಭೀರ್ಯ, ಪೆಂಪು ತುಂಬಿದ. ತನ್ನ ಮೊದಲಿನ ಊರಾದ 'ಚಾಗದ ಭೋಗದ ಗೇಯದ ಗೊಟ್ಟಿಯ ಅಲಂಪಿನ ಇಂಪಿಗೆ ಆಗರ' ವಾದ ಬನವಾಸಿಗೆ ಅರ್ಜುನನ್ನು (ಅರಿಕೇಸರಿಯನ್ನು) ಕರಕೊಂಡು ಹೋಗಿ ಅಲ್ಲಿಯ ನೆಲದ ಸಂಪತ್ತನ್ನು ಅಭಿಮಾನದಿಂದ ತೋರಿಸಿದ.

**ಅರಿಕೇಸರಿಯನ್ನು ಕಿರೀಟಿಗೆ ತಗುಳ್ಚಿದ ತೊಡಕು**

ಜಿನದೇವರನ್ನು ಬಿಟ್ಟು ಬೇರೆ ಯಾರೂ ಏನನ್ನೂ ಕೊಡಲು ಸಮರ್ಥರಲ್ಲ ಎಂದು ನಿರ್ದಿಷ್ಟವಾಗಿ ಹೇಳಿದ ಮಾತು ಪಂಪನ ಜೈನನಿಷ್ಠೆಯನ್ನು ಸ್ಪಷ್ಟಪಡಿಸುತ್ತದೆ. 'ಪೆರರೀವುದೇಂ ಪೆರರು ಮಾಡುವುದೇಂ ಪೆರರಿಂದಮಪ್ಪುದೇಂ', ಆದಿ ಪುರಾಣವನ್ನು ಬರೆದ ಕವಿ ರಾಜಾಶ್ರಯದಲ್ಲಿರಲಿಲ್ಲ. ಅರಿಕೇಸರಿಯ ಪರಿಚಯವೂ ಅವನಿಗಿರಲಿಲ್ಲ. ಆದರೆ 'ಭೂಭುಜನಂ ಕಿರೀಟಿಯೊಳ್ ತಗುಳ್ಚಿ ಪೋಲಿಪೋಡೆ ಎನಗೆ ಅಳ್ತಿಯಾದುದು' ಎಂದವನು ಹೇಳಬೇಕಾದರೆ ಈ 'ಅಳ್ತಿ' ಏಕಾಯಿತು ಎಂದು ತಿಳಿಯುವ ಅಗತ್ಯ ಕಾಣುತ್ತದೆ.

ಪಂಪನ ಕವಿ ಪ್ರತಿಭೆಯ ಕುರಿತು ಅರಿಕೇಸರಿ ಕೇಳಿರಬೇಕು (ವಿವರ ಸಿಗುವುದಿಲ್ಲ). ಅವನು ಕಲಿಯೂ ಆಗಿದ್ದನೆಂದು ಒಂದು ಪದ್ಯ ಹೇಳುತ್ತದೆ. ಕವಿಯಾಗಿ ಅವನು ಅರಸನ 'ನೆಗಳ್ತೆ'ಯನ್ನು ಮೆರೆಸಿದ. ಕಲಿಯಾಗಿ 'ಜೋಳವಾಳಿ' ಯನ್ನು ತೀರಿಸಿದ. ಆದಿ ಪುರಾಣದಿಂದ ಪಂಪನ ಕೀರ್ತಿ ಎಲ್ಲೆಡೆಯಲ್ಲಿ ಹರಡಿದ್ದು, ಅಂಥ ಕವಿ, ಪ್ರತಿಭೆಗೆ ಕೊರತೆಯಿದ್ದ ತನ್ನ ಆಸ್ಥಾನದಲ್ಲಿ ಇರುವುದು ಶೋಭೆ ಎಂಬ ಸಹಜವಾದ ಅಪೇಕ್ಷೆ ಅರಿಕೇಸರಿಯದಾಗಿರಬಹುದು. ಪ್ರತಿಭಾವಂತರನ್ನು ಆಸ್ಥಾನದಲ್ಲಿಟ್ಟುಕೊಂಡು 'ನೆಗಳ್ತೆ' ಪಡೆಯುವ ಅಭಿಲಾಶೆ ನಮ್ಮ ದೇಶದ ಅರಸರ ಪರಂಪರೆ, ಅದಕ್ಕಾಗಿ ಅರಿಕೇಸರಿ ಪಂಪನನ್ನು ತನ್ನ ರಾಜ್ಯಕ್ಕೆ ಆಹ್ವಾನಿಸಿದನು. ಆಮಂತ್ರಿಸಿದನು. ಅಥವಾ ಯಾವುದೋ ಕವಿಗೋಷ್ಠಿಯಲ್ಲಿ ಸಮರದಲ್ಲಿ ಪಂಪನ ಪರಿಚಯವಾಗಿರಬಹುದು. ಪಂಪನು ಜೈನನಾಗಿ, ಕವಿತಾಗುಣಾರ್ಣವನಾಗಿದ್ದರೂ, ಸುಖಭೋಗ, ಕೀರ್ತಿ ಆದರಗಳಿಂದ ಬಹುಶಃ ವಂಚಿತನಾಗಿದ್ದನು. ಇವೆಲ್ಲದರ ಸಹಜವಾದ ಅಪೇಕ್ಷೆ ಪಂಪನಲ್ಲಿಯೂ ಇದ್ದು ಅವನು ಅರಿಕೇಸರಿಯ ಆಮಂತ್ರಣವನ್ನು ಕೃತಜ್ಞತಾ ಭಾವದಿಂದ ಸ್ವೀಕರಿಸಿದನು. ಅಲ್ಲದೆ ಪಂಪ ಭಾರತದಲ್ಲಿ ವರ್ಣಿಸಿದಂತೆ ಅರಿಕೇಸರಿಯ 'ಸಾಮಂತ ಚೂಡಾಮಣಿ', ಗುಣಾರ್ಣವ, ದಾನ, ಪರಾಕ್ರಮಗಳಿಗೆ ಪ್ರಸಿದ್ಧ. ಕಾವ್ಯಪ್ರಿಯ ಎಂಬ ಬಿರುದುಗಳನ್ನು ಹೊರಗಿನಿಂದಲೆ ಪಂಪ ಕೇಳಿರಬೇಕು. ಚಕ್ರವರ್ತಿಯನ್ನು ಸೋಲಿಸಿ ಸಾಮಂತನಾಗಿಯೇ ಉಳಿಯ ಬಯಸಿದ ಆತನ ಹಿರಿಮೆಯನ್ನು ಮೆಚ್ಚಿಕೊಂಡಿರಬೇಕು. ಇಷ್ಟು ಸಂಪನ್ನ ಅರಸನ ಆಸ್ಥಾನದಲ್ಲಿ ಒಂದನೇ ನಂಬರಿನ ಕವಿಯಾಗಿ, ಮಿತ್ರನಾಗಿ ಎಲ್ಲಾ ಸವಲತ್ತುಗಳಿಗೆ ಪಾತ್ರನಾಗಿರಲು ಯಾರು ತಾನೇ ಬಯಸುವುದಿಲ್ಲ ? ಹಾಗೆ ಪಂಪ ಸುಖಾಭಿಲಾಶಿಯೂ, ರಸಿಕನೂ ಆಗಿದ್ದನೆಂದು ಕೆಲವು ಪದ್ಯದಿಂದ ತಿಳಿಯುತ್ತದೆ.

ಪಂಪನನ್ನು ಅರಿಕೇಸರಿ ತನ್ನ ಸಭೆಗೆ ಸ್ವಾಗತಿಸಿದ ಸನ್ನಿವೇಶ 'ವಿದ್ಯಾ ಪ್ರದರ್ಶನ'ದ ವರ್ಣನೆಯಲ್ಲಿ ಚಿತ್ರವತ್ತಾಗಿ ಬಂದಿದೆ. ಆ ಸಭೆಗೆ ಕರ್ಣಬರುವ ರೀವಿ, ಅವನ ತೇಜಸ್ಸು. ಅದಕ್ಕೆ ಮಂತ್ರ ಮುಗ್ಧವಾದ ಮಹಾಸಭೆ. ಅರ್ಜುನ ಮಾಡಿದ್ದನ್ನೆಲ್ಲ ಕರ್ಣ ಸುಲಭವಾಗಿ ಮಾಡಿ ತೋರಿದ ಬಗೆ. ಸತ್ಕುಲಜರು 'ಆವುದು ಸಮಕಟ್ಟು ನಿನಗಂ ಅರಿಕೇಸರಿಗಂ' ಎಂದು ವಿರೋಧ ತೋರಿಸಿದ್ದು ಇತ್ಯಾದಿ ಅರಿಕೇಸರಿಯ ಪ್ರಬುದ್ಧರ ಸಭೆಯನ್ನು ಪಂಪ ಪ್ರವೇಶಿಸಿದ ಸನ್ನಿವೇಶವನ್ನು ಧ್ವನಿಸುತ್ತದೆ. ಆಗ ಅರಿಕೇಸರಿ ಕ್ಷಣಕಾಲ ದುರ್ಯೋಧನನ ಪಾತ್ರವನ್ನು ನಾಟಕೀಯವಾಗಿ ವಹಿಸಿ ಪ್ರತಿಭಾಶಾಲಿ ಕರ್ಣನನ್ನು= ಪಂಪನನ್ನು ಕವಿತಾ 'ಗುಣಾರ್ಣವ'ನೆಂದು ಬಿರುದು ಕೊಟ್ಟು ಸತ್ಕರಿಸುತ್ತಾನೆ.



✍ ಡಾ. ವಿಶ್ವನಾಥ ಕಾರ್ನಾಡ್

ಪಂಪನಿಗೆ ಅರಿಕೇಸರಿಯ ಮೇಲೆ ವಿಶೇಷವಾದ ಅಭಿಮಾನ. ತನ್ನ ಪ್ರತಿಭೆಗೆ ಮೆಚ್ಚಿ ಅಲ್ಲಿ ಆಗಲೇ ಇದ್ದ ವಿದ್ವಾಂಸರ ವಿರೋಧವನ್ನು ಲೆಕ್ಕಿಸದೆ ಕರೆದು ಸನ್ಮಾನಿಸಿದನೆಂಬ ಆದರ, ಇವು ಅರಸನ ಕುರಿತಾದ ಭಾವನೆಯನ್ನು ಪುಷ್ಟೀಕರಿಸಿರಬೇಕು. ಪರಸ್ಪರ ಆದರ ಭಾವದ ಈ ಹಿನ್ನೆಲೆಯಲ್ಲಿ ಅವರ ನಡುವೆ ಬಂಧುರವಾದ ಸ್ನೇಹ ಬೆಳೆದುದು ಬಗೆಬಗೆಯಾಗಿ ಕಾವ್ಯದಲ್ಲಿ ವ್ಯಕ್ತವಾಗಿದೆ. ಅರಸನು ತನ್ನ ಕುರಿತು ಕಾವ್ಯ ಬರೆಯಲು ಹೇಳಿರಲಾರ. ಆದಿಪುರಾಣದಂತೆಯೆ ಒಂದು ವೈದಿಕ ಕಾವ್ಯ ರಚನೆಯ ಪ್ರಸ್ತಾಪ ಮಾಡಿರಬಹುದು. ತಾನು ಎಲ್ಲಾ ಬಗೆಯಲ್ಲಿಯೂ ಮೆಚ್ಚಿಕೊಂಡಿದ್ದ. ತನ್ನ ದೃಷ್ಟಿಯಲ್ಲಿ 'ಹೀರೋ' ನಂತಿದ್ದ (ಹೀರೋವರ್ಶಿಪ್ಪು ನಮ್ಮ ಪ್ರಾಚೀನ ಪರಂಪರೆ) ಅರಿಕೇಸರಿಯನ್ನು ಕಾವ್ಯ ನಾಯಕನನ್ನಾಗಿ ಚಿತ್ರಿಸುವ ಕಾವ್ಯವಸ್ತು ಹೊಳೆಯದೆ. ವ್ಯಾಸ ಭಾರತವನ್ನು ಸಮಗ್ರವಾಗಿ ಸಂಗ್ರಹಿಸಿ ಬರೆಯುವ ಯೋಚನೆ ಮಾಡಿದ. ತನ್ನ ಜನಪ್ರಿಯ ಹೀರೋ ಲೈಕ್ ಅರಿಕೇಸರಿಯನ್ನು ಅದೇ ನಿಲುವಿನ ಅರ್ಜುನನಿಗೆ ಹೋಲಿಸಿ ಬರೆಯತೊಡಗಿದ. ಅರಸನು ಮಾಡಿದ ಉಪಕಾರಗಳ ಋಣ ತೀರಿಸುವ ಉದ್ದೇಶವೂ ಇದರಲ್ಲಿತ್ತು. ಈ ಜೋಳದಪಾಳಿಯ ಭಾವನೆ ಪಂಪನಲ್ಲಿ ತೀವ್ರವಾಗಿತ್ತೆಂದು ಅವನ ಕೆಲವು ಪ್ರಮುಖ ಪಾತ್ರಗಳ ನಡವಳಿಕೆಯಿಂದ ತಿಳಿಯುತ್ತದೆ. ಪಂಪನ ಮಟ್ಟಿಗೆ ದುರ್ಯೋಧನ ಅರಿಕೇಸರಿ. ಕರ್ಣ ತಾನು. ಕರ್ಣ ಕೊನೆಯವರೆಗೂ ದುರ್ಯೋಧನನ ಜೊತೆಯಲ್ಲಿದ್ದುದು ಋಣಮುಕ್ತಿಯ ಸಲುವಾಗಿಯೇ.

ಭಾರತದ ಕತೆ ಹಿರಿದಾದರೂ ಅದರ 'ಮೃಗೆಡಲೀಯದೆ' ಬರೆಯಲು ತನ್ನಿಂದ ಮಾತ್ರ ಸಾಧ್ಯವೆಂದು ಅವನಿಗೆ ತಿಳಿದಿತ್ತು. ಅಲ್ಲದೆ 'ಸಮಸ್ತ ಭಾರತಮನ್ ಅಪೂರ್ವಮಾಗೆ ಪೇಳ್ದ ಕವೀಶ್ವರರಿಲ್ಲ- ಪೇಳ್ವೊಡೆ ಪಂಪನೆ ಪೇಳ್ಗುಂ' ಎಂದು ಪಂಡಿತರು 'ತಗುಳ್ದು ಬಿಚ್ಚಳಿಸೆ ಒಡರ್ಚಿದನ್ ಈ ಪ್ರಬಂಧಮಂ'. ಒಂದು ಪುರಾಣ ಕತೆಯನ್ನು ಸಮಕಾಲೀನ ರಾಜಕೀಯ ಇತಿಹಾಸಕ್ಕೆ ಅಳವಡಿಸುವಾಗ ಪಂಪನಿಗೆ ಕೆಲವೊಂದು Compromiseಗಳನ್ನು ಮಾಡಿ ಕೊಳ್ಳಬೇಕಾಯಿತು.

- ಅರ್ಜುನನ್ನು ಅರಿಕೇಸರಿಗೆ ಹೋಲಿಸುವುದು.

- ಅರ್ಜುನನ ಬಿರುದುಗಳನ್ನು ಅರಿಕೇಸರಿಗೂ, ಅರಿಕೇಸರಿಯ ಬಿರುದುಗಳನ್ನು ಅರ್ಜುನನಿಗೂ ಕೊಟ್ಟು ವರ್ಣಿಸುವುದು.

- ಅರ್ಜುನನ ಸ್ವಭಾವದಲ್ಲಿದ್ದ ಅಹಂಕಾರ, ದ್ವೇಷಗಳ ಪ್ರಮಾಣವನ್ನು ಕಡಿಮೆ ಮಾಡುವುದು.

- ಅರಿಕೇಸರಿ ಮಾಡದ ಮೂಲ ಕತೆಯಲ್ಲಿ ಮಾಡಿದ ಅನ್ಯಾಯ, ಉಲೂಪಿ, ಚಿತ್ರಾಂಗದೆಯರ ಜೊತೆ ವಿವಾಹ, ನಿರಾಯುಧನಾದ ಕರ್ಣನ ಕೊಲೆ ಇತ್ಯಾದಿಯನ್ನು ಉಪಾಯವಿಲ್ಲದೆ ಮಾಡಿಸುವುದು.

- ಸುಭದ್ರೆಯನ್ನು ತಂದು ಪಟ್ಟಕ್ಕೇರಿಸುವುದು.

ಇಂಥ ಕೆಲವು ಪರಿಸ್ಥಿತಿಯಲ್ಲಿ ಪಂಪ ಅರಿಕೇಸರಿಯನ್ನು ಕರ್ಣನಲ್ಲಿ, ದುರ್ಯೋಧನನಲ್ಲಿ ಕಾಣುವಷ್ಟು ವಿವಶನಾಗುತ್ತಾನೆ.

**ದಿಬ್ಯಂಬಿಡಿವಂತೆವೋಲ್ ಪಿಡಿದುದರ ಗೊಂದಲ**

ರಾಜಾ ಶಂತನು ಸತ್ಯವತಿಯ ಮೋಹದ ಬಲೆಯಲ್ಲಿ ಬಿದ್ದ ಸಂದರ್ಭವನ್ನು ವಿವರಿಸುವ ಪದ್ಯ ಪಂಪಭಾರತದಲ್ಲಿಯೆ ರೋಚಕವಾದುದು.

'ಮೃಗಯಾ ವ್ಯಾಜದಿನೊರ್ಮೆ ಶಂತನು
ತೊವಿಲ್ವರ್ಪಂ ಪಳಂಚಲ್ಕಿತ |
ನ್ಮೃಗಶಾಬಾಕ್ಷಿಯ ಕಂಪು ತಟ್ಟೆ ಮಧುಪಂ
ಬೋಲ್ ಸೋಲ್ತು ಕಂಡೊಲ್ದು ನ

ಲ್ಮೆಗೆ ದಿಬ್ಯಂಪಿಡಿವಂತೆವೋಲ್ ಪಿಡಿದು ನೀಂ ಬಾ
ಪೋಪಮೆಂದಂಗೆ ಮೆ |
ಲ್ಲಗೆ ತತ್ಕನ್ಯತೆ ನಾಣ್ಚೆ ಬೇಡುವೊಡೆ
ನೀವೆಮ್ಮಯ್ಯನಂ ಬೇಡಿರೇ'

ಈ ವೃತ್ತದಲ್ಲಿಯ ದಿಬ್ಯಂಬಿಡಿವಂತೆವೋಲ್' ಅನೇಕ ವಿದ್ವಾಂಸರ ಟಿಪ್ಪಣಿಗೆ ಪಾತ್ರವಾಗಿದೆ. ತಮ ತಮಗೆ ಅನಿಸಿದ ರೀತಿಯಲ್ಲಿ ಅರ್ಥೈಸುವ ಪ್ರಯತ್ನ ಮಾಡಿದ್ದಾರೆ. (ಅವರ ವಿವರ ಇಲ್ಲಿ ಬೇಡ) 'ದಿಬ್ಯಂ' ಎಂಬ ಶಬ್ದಕ್ಕೆ Trail of ordeal, ಧೂಮಕೇತು, ಸಂಕಟ, ಮಾರಿ ಎಂಬ ಅರ್ಥ ಏಕೋ ಸಮರ್ಪಕವೆಂದು ನನಗೆ ತೋರುವುದಿಲ್ಲ. 'ದಿಬ್ಯಂ' ದಿವ್ಯವೇ ಆಗಿದೆ. 'ಅಂ' ಪ್ರತ್ಯಯದಿಂದ ದಿವ್ಯವಾದುದು ಎಂಬ ಸರಳ ಅರ್ಥವೇ ಹೊರಡುತ್ತದೆ. ದಿವ್ಯವಾದುದು, ಸ್ವರ್ಗೀಯವಾದುದು, ಅಲೌಕಿಕವಾದುದು (Celestial) ಪರಾಶರರಿಂದ ಕನ್ಯತ್ವವನ್ನು ಮರಳಿ ಪಡೆದು ಯೋಜನಗಂಧಿಯಾದ ಸತ್ಯವತಿ, ಗಂಗೆ ತ್ಯಜಿಸಿ ಹೋದ ನಂತರ ಸ್ತ್ರೀ ಸುಖದ ಉತ್ಕಟೇಚ್ಛೆಯನ್ನು ಹೊಂದಿದ ಶಂತನು ಮಹಾರಾಜನಿಗೆ ಸ್ವರ್ಗದ ಅಪ್ಸರೆಯಂತೆ ದಿವ್ಯವಾಗಿ ಕಂಡಳು. ಅಪೂರ್ವವಾದ ಸೌಂದರ್ಯ, ಮೈ- ಮನಸ್ಸನ್ನು ಉದ್ರೇಕಿಸುವ ಮೈ ಸೊಬಗು, ಕಂಪು ಅವನಿಗೆ ತಟ್ಟಿತು. ಅವನು ಕೂಡಲೇ ದಿವ್ಯ ವಸ್ತುವನ್ನು ಪಡೆಯುವ ಇಚ್ಛೆಗೆ ಶರಣಾದ. ಅವಳ ಪ್ರೇಮದಲ್ಲಿ ಬಿದ್ದ Falls in love. ಹಿಡಿಯ ಬಯಸಿ ಹಿಡಿದು ಬರಹೇಳಿದ. ದಿವ್ಯ ಸ್ವರ್ಗೀಯ ವಸ್ತು ಮಾಯಾಜಾಲವಾಗಿರುತ್ತದೆ (deceptive). ಅದನ್ನು ಪಡೆಯಲು ಹೋದವನು ಮೋಸ ಹೋಗುತ್ತಾನೆ. ಇದು ನಮ್ಮ ಪುರಾಣ ಪರಂಪರೆಯಾಗಿದೆ. ವಿಶ್ವಾಮಿತ್ರನೇ ಮೊದಲಾದ ಋಷಿ ಮುನಿ, ದಿವ್ಯ ವ್ಯಕ್ತಿಗಳು ಸ್ವರ್ಗ ಸುಂದರಿಯರಿಂದ ಕೆಟ್ಟಿದ್ದಾರೆ. ಪರಾಶರ ಮುನಿಯೇ ಮತ್ಸ್ಯಗಂಧಿಯ ಮೋಹಕ್ಕೊಳಗಾಗಿ ಋಷಿತ್ವವನ್ನು ಕೆಡಿಸಿಕೊಂಡ ಉದಾಹರಣೆ ಪಂಪನ ಎದುರಿಗಿದೆ. ಇಲ್ಲಿಯೂ ಅಂತಹ ಶಬ್ದಕ್ಕೆ ಸಿಗದ, ವಿಪತ್ತು ತರಬಹುದಾದ, ಮೋಸದ 'ದಿವ್ಯ'ವನ್ನು ಕಂಡು, ಹಿಡಿಯಲು ಹೋದ. ಇಲ್ಲಿ ಸತ್ಯವತಿಯೆ ಆ ದಿವ್ಯ- ಮೋಸ. ಶಂತನುವನ್ನು ದಿಬ್ಯ ಎಂದು ಹೇಳುವುದು ಸರಿಯಲ್ಲ. ಅವನು ಪ್ರೀತಿಯ ಪ್ರಮಾಣಕ್ಕೆ ಸಾಕ್ಷಿಯಾಗಿ ದಿವ್ಯವಾದ ಅವಳ ಕೈಯನ್ನು ಹಿಡಿದನೆಂದರೂ ಆ ಗಳಿಗೆಯಲ್ಲಿ ಹುಟ್ಟಿದ ಪ್ರೀತಿ ಅಷ್ಟು ಗಾಢವಾದುದೇ ಎಂಬ ಸಂಶಯ ಬರುತ್ತದೆ. ದಿಬ್ಯ(ವ್ಯ)ವಾದ ಇನ್ನೊಂದು ವಸ್ತುವನ್ನು ಹಿಡಿಯುವಂತೆ ಅವಳ ಕೈ ಹಿಡಿದನು ಎನ್ನುವಲ್ಲಿ ಹೆಚ್ಚು ಗೊಂದಲ ಕಾಣಿಸುತ್ತದೆ, ಅಗ್ನಿ ಸ್ವರೂಪದ ಕೇತುಗಳೇ ದಿವ್ಯ ಎಂಬ ರೇವಣ ಶಾಸ್ತ್ರಿಗಳ ಅರ್ಥ ಸಂದರ್ಭೋಚಿತವಾಗುವುದಿಲ್ಲ. ಅದನ್ನ ಹಿಡಿಯುವವರು ಬೀಳುತ್ತಾರೆ ಎಂಬ 'ಅನಿಷ್ಟ' ಸೂಚಕವಾಗಿದೆ 'ದಿಬ್ಯ'. ಪಂಪನಿಗೆ ಶಂತನುವಿನ ಈ ಪ್ರೇಮಪತನ ಮುಂದಿನ ಎಲ್ಲಾ ವಿನಾಶ, ದುರಂತಗಳಿಗೆ ಕಾರಣವಾಗಲಿದೆ ಎಂದು ಸ್ಪಷ್ಟ ಕಲ್ಪನೆ ಇತ್ತು. ಅದಕ್ಕಾಗಿಯೇ ಈ ಇಡೀ ಪದ್ಯವನ್ನು ಸಂಕೇತವಾಗಿ ರಚಿಸಿದ್ದಾನೆ. 'Coming events cast their shadows before' ಎಂಬ ಹಾಗೆ. ಶೇಕ್ಸ್‌ಪಿಯರ್‌ನ ಸೋಲಿಲೊಕ್ಕಿಗಳು ನಾಟಕ ಕ್ರಿಯೆಯಲ್ಲಿ ಮುಂದೆ ಆಗಲಿರುವ ದುರಂತವನ್ನು ಸೂಚಿಸುತ್ತವೆ. ಈ ಪದ್ಯವೂ ನಾಟಕೀಯವಾಗಿದೆ. ಇಲ್ಲಿಯ ಪ್ರತಿಯೊಂದು ಶಬ್ದಗಳನ್ನು ಅತ್ಯಂತ ಚಾಕ- ಚಕ್ಯತೆಯಿಂದ ಪಂಪ ಉಪಯೋಗಿಸಿಕೊಂಡಿದ್ದಾನೆ. ಸತ್ಯವತಿಯ ಕಂಪಿಗೆ ಶಂತನು 'ಮಧುಪಂಬೋಲ್' ಸೋಲ್ತನು, ನಲ್ಮೆಗೆ- ಮೋಹಕ್ಕೆ, ಮೋಹವೇ ಕಾರಣವಾಗಿ, ದಿವ್ಯಕನ್ನೆಯಾದ ಅವಳನ್ನು- ಆ ಆಪತ್ತನ್ನು ಹಿಡಿದು 'ನೀನ್ ಬಾ ಪೋಪಂ' ಎಂದು ಕೈ ಹಿಡಿದು ಕರೆದನು. ಈಗಾಗಲೇ ದಿವ್ಯ ಮುನಿಯೊಬ್ಬನಿಂದ ('ದಿವ್ಯಮುನಿಗಳ್ಗೆ ಪಗೆಯ್ದೊಡಂ ತೀರದೇ'- ಎಂದು ಪರಾಶರ ಮುನಿಯ ವ್ಯವಹಾರವನ್ನು ಪ್ರಶ್ನಿಸುವಲ್ಲಿಯೂ 'ದಿವ್ಯ' ಶಬ್ದವನ್ನು ಕವಿಯುಕ್ತವಾಗಿ ಉಪಯೋಗಿಸಿದ್ದಾನೆ.) ಶರೀರ ಸುಖ ಪಡೆದು ಕನ್ಯತ್ವದ ವರವನ್ನು ಪಡೆದ ಸತ್ಯವತಿಗೆ ಶಂತನು ಮಹಾರಾಜನ ಪರಿಚಯವಿತ್ತು. ಅವನು ತನ್ನ ಮೋಹದಲ್ಲಿ ಪರವಶನಾಗಿರುವ ಪರಿಸ್ಥಿತಿಯನ್ನು ಅವಳು ಸರಿಯಾಗಿ ಅರ್ಥಮಾಡಿಕೊಂಡಳು. ಪರಾಶರ ಮುನಿಯೊಂದಿಗೆ ಸುಖಿಸುವಾಗ 'ನಾಣ್ಚದ', ತಂದೆಯ ನೆನಪು ಮಾಡಿಕೊಳ್ಳದ ಸತ್ಯವತಿ ಈಗ ಮಹತ್ವಾಕಾಂಕ್ಷಿಯಾದಳು. ಅವನಿಂದ ಹಸ್ತಿನಾಪುರದ ಮಹಾರಾಣಿಯಾಗುವ ಯೋಗ ತನ್ನಂಥ ಬೆಸ್ತರವಳಿಗೆ ಬಂದಿದೆ ಎಂದು ಅವಳಿಗೆ ಹೊಳೆದು ಹೋಯಿತು. ಅವಳು ಶಂತನುವಿನ ಸ್ತ್ರೀ ಮೋಹಕ್ಕೆ ಮರುಳಾಗದೆ ಅರಸನ ಬೇಡಿಕೆಯನ್ನು ಮನ್ನಿಸದೆ 'ಮೆಲ್ಲಗೆ ನಾಣ್ಚಿ ತತ್ಕನ್ಯಕ್ಕೆ (ಕನ್ಯತ್ವ ಪಡೆದವಳು)' ಬೇಡುವೊಡೆ ನೀವೆಮ್ಮ ಅಯ್ಯನಂ ಬೇಡಿರಿ' ಎಂದು ಹೇಳುವಳು. ಶಂತನು- ಸತ್ಯವತಿ ಪ್ರಣಯ ಕತೆ ಮಹಾಭಾರತದ ಅತ್ಯಂತ ಮಹತ್ವದ ಪ್ರಕರಣ. ಮುಂದಿನ ಕತೆಯನ್ನು ಸಾಗಿಸಿಕೊಂಡು ಹೋಗುವ ದೃಢಭೂಮಿಕೆಯಿರುವ ಪ್ರಸಂಗ. ಪಂಪ ಇದರ ಸಮಗ್ರತೆ, ಅವಶ್ಯಕತೆಯನ್ನು ಅದ್ಭುತವಾಗಿ ಅರ್ಥಮಾಡಿಕೊಂಡಿದ್ದಾನೆ. ಈ ಪದ್ಯವನ್ನು ಪಂಪ ಭಾರತದ 'ಕೇಂದ್ರ ಕ್ರಿಯಾ ಸೂಚೀ' ಪದ್ಯವನ್ನಾಗಿ ರಚಿಸಿ ಕಾವ್ಯ ಪ್ರತಿಭೆಯನ್ನು ತೋರಿಸಿದ್ದಾನೆ. ಮಹಾಭಾರತದ ಮಟ್ಟಿಗೆ ಇದೊಂದು ಸುಂದರ, ಸಂವೇದನಶೀಲ ಪ್ರೇಮಕತೆಯೂ ಆಗಿದೆ. ಸುಖದಿನಗಳನ್ನು ಕಳೆಯುತ್ತಿದ್ದಂತೆ ಶಂತನು- ಸತ್ಯವತಿ ಇಬ್ಬರೂ ತಮ್ಮ ತಪ್ಪಿನ ಅರಿವಾಗಿ ನಿರಂತರ ಪಶ್ಚಾತ್ತಾಪಕ್ಕೆ ಒಳಗಾಗುತ್ತಾರೆ. ಭೀಷ್ಮನಿಗಾದ ಅನ್ಯಾಯಕ್ಕೆ ತಾವೇ ಕಾರಣೀಭೂತರೆಂಬ ಪಾಪಪ್ರಜ್ಞೆ ಇಬ್ಬರಲ್ಲಿಯೂ ಬೆಳೆದು ಅಸಹ್ಯ ಕೊರಗಿಗೆ ಕಾರಣವಾಗುತ್ತದೆ. ಶಂತನು ನಿಷ್ಕ್ರಿಯನಾಗಿ, ಮನೋರೋಗಿಯಾಗಿ ಹಾಸಿಗೆ ಹಿಡಿದು ಸಾಯುತ್ತಾನೆ. ಭೀಷ್ಮ ಉತ್ತರೋತ್ತರ ಪ್ರತಿಜ್ಞೆಯ ಬಂಧನದಲ್ಲಿ ಬಿಗಿದುಕೊಂಡು? ಕ್ರಮಶ ದುರ್ಬಲನಾಗುತ್ತಾನೆ. ಮುಂದಕ್ಕೆ ಶಂತನುವಿನ ವಂಶದಲ್ಲಿ ಉದ್ಭವಿಸಲಿರುವ ಇದೆಲ್ಲ ವಿಪತ್ತುಗಳನ್ನು 'ದಿಬ್ಯಂ ಬಿಡಿವಂತೆ ವೋಲ್' ಎಂಬ ಸಾಲು ಧ್ವನಿಸುತ್ತದೆ.

## ಒಡಕು ತುಂಬಿದ ದುರ್ಯೋಧನ ಪಕ್ಷ :

ಆಧುನಿಕ ಸಂದರ್ಭಕ್ಕೆ ಅನ್ವಯಿಸಿ ಹೇಳುವುದಾದರೆ ಮಹಾಭಾರತ ಯುದ್ಧದ ಕೌರವ ಪಕ್ಷವನ್ನು ಮೊರಾರಜಿ ದೇಸಾಯಿಯ 'ಯುನೈಟೆಡ್ ಫ್ರಂಟ್'ಗೆ ಹೋಲಿಸಬಹುದು. ಅದರಲ್ಲಿರುವ ಮಹಾತ್ವಾಕಾಂಕ್ಷೀ ನಾಯಕರೇ ಈ ಪಕ್ಷವನ್ನು ಒಡೆದು ಸತ್ತೆಯ ಅವನತಿಗೆ ಕಾರಣವಾದಂತೆ ದುರ್ಯೋಧನನ ಪಕ್ಷದ ಪ್ರತಿಯೊಬ್ಬ ನಾಯಕರೂ ವ್ಯಕ್ತಿಗತ ಸ್ವಾರ್ಥ, ಅಹಂಕಾರ, ಸ್ವಾಭಿಮಾನಗಳಿಂದ ಅವನ ಪತನಕ್ಕೆ ಕಾರಣವಾದರು. ದೇಶಭಕ್ತಿ, ಸ್ವಾಮಿಭಕ್ತಿ, ಕರ್ತವ್ಯ ನಿಷ್ಠೆಯಿಂದ ಯಾರೂ ಕೌರವನಿಗಾಗಿ ಹೋರಾಡಲಿಲ್ಲ. ಭೀಷ್ಮ, ದ್ರೋಣ, ಕರ್ಣ, ಶಲ್ಯ, ಕೃಪ, ಅಶ್ವತ್ಥಾಮ ಇವರೆಲ್ಲ ದೇವಿಲಾಲ್, ಚರಣಸಿಂಗ್, ಚಂದ್ರಶೇಖರ, ಲಿಮಯೆ, ಫೆರ್ನಾಂಡಿಸ್, ಚೌತಾಲರಿಗೆ ಹೋಲುತ್ತಾರೆ. ಪ್ರತಿಯೊಬ್ಬ ಮಹಾರಥಿಗೂ ಒಡೆಯನ ಕಾರ್ಯಕ್ಕಿಂತ ಮಿಗಿಲಾದ ವೈಯಕ್ತಿಕ ಮಹತ್ವಾಕಾಂಕ್ಷೆಗಳಿದ್ದವು. ಭೀಷ್ಮ ಮೊದಲಿನಿಂದಲೂ ತಾನು ಬ್ರಹ್ಮಚರ್ಯಕ್ಕೆ ಒಳಗಾಗಿ, ಹಸ್ತಿನಾಪುರದ ಸಿಂಹಾಸನದಿಂದ ವಂಚಿತನಾಗಿ, ಪಾಂಡವ ಪಕ್ಷಪಾತಿಯಾಗಿ ಡಬಲ್ ಸ್ಟ್ಯಾಂಡರ್ಡ್ ಜೀವನ ನಡೆಸುತ್ತಾ ನಿರ್ವೀರ್ಯನಾಗಿದ್ದಾನೆ. ವಿವಶನಾಗಿದ್ದಾನೆ. ಧೃತರಾಷ್ಟ್ರ, ದುರ್ಯೋಧನರನ್ನು ತನ್ನ ಅಂಕಿತದಲ್ಲಿ ಇಟ್ಟುಕೊಳ್ಳಲಾರದೆ ಅವರ ದುಷ್ಕೃತ್ಯಗಳಿಗೆ ಜೀವಂತ ಸಾಕ್ಷಿಯಾಗುತ್ತಾನೆ. ತುಂಬಿದ ಸಭೆಯಲ್ಲಿ ಜೂಜಿನಿಂದಾಗುವ ಅನಾಹುತ, ದ್ರೌಪದಿಯ ಮಾನಭಂಗವನ್ನು ತಡೆಯಲಾರದೆ ಕೈಲಾಗದವನಂತೆ ದಿಙ್ಮೂಢನಾಗಿ ಮೂಕನಾಗುತ್ತಾನೆ. ಅವನ ಸಂರಕ್ಷಣೆಯಲ್ಲಿರುವ ಕೌರವ ರಾಜ್ಯದಲ್ಲಿ ಪಾಂಡವರ ಕುಲವಧುವೇ ಈ ಬಗೆಯ ಮಾನಹಾನಿಗೆ ಒಳಗಾದರೆ ದೇಶದ ಉಳಿದೆಡೆಯಲ್ಲಿ ಸಾಮಾನ್ಯ ಸ್ತ್ರೀಯರ ಗತಿಯೇನು? ದುರ್ಯೋಧನ ನೀತಿವಂತ, ಜನ ಮಾನ್ಯನೆಂಬ ಕಾರಣದಿಂದ ಅವನ ರಾಜ್ಯದಲ್ಲಿ ಈ ಬಗೆಯ ದುರ್ಘಟನೆಯ ವಿವರ ಸಿಗುವುದಿಲ್ಲ. ಕುಮಾರವ್ಯಾಸನೂ ದುರ್ಯೋಧನ ಪ್ರಜಾರಕ್ಷಕನೆಂಬ ಮಾತನ್ನು ಹೇಳಿದ್ದಾನೆ. ದಾನ ಪುಣ್ಯ ಕಾರ್ಯದಲ್ಲಿ ದುರ್ಯೋಧನ ಹಸ್ತಿನಾಪುರದ ಸಂಪತ್ತನ್ನು ಲುಟಾಯಿಸುತ್ತಿದ್ದಾನೆಂದು ಪಾಂಡವೇ ಆರೋಪಿಸುತ್ತಾರೆ. ಪಾಂಡವರನ್ನು ಕರೆಸಿ ಅರ್ಧ ರಾಜ್ಯವನ್ನು ಕೊಡೆಂದು ಭೀಷ್ಮ ದುರ್ಯೋಧನನಿಗೆ ಹೇಳುವ ಅಗತ್ಯವೇನಿತ್ತು. ತಾನೇ ಅಧಿಕಾರವಾಣಿಯಿಂದ ಕೊಡೆಂದು ಆಜ್ಞಾಪಿಸಬಹುದಿತ್ತು. ಅವನು ವಿರೋಧಿಸಿದ್ದರೆ ಅವನನ್ನು

ದಂಡಿಸಬಹುದಿತ್ತು. ವನವಾಸವನ್ನು ತಪ್ಪಿಸಬಹುದಿತ್ತು. ಶಕುನಿಯನ್ನು ಗಾಂಧಾರಕ್ಕೆ ವಾಪಾಸ್ ಅಟ್ಟಬಹುದಿತ್ತು. 'ಸೂಳ್ಪಡೆಯಲಪ್ಪುದು ಕಾಣಾ ಮಹಾಜಿರಂಗದೊಳ್' ಎಂದು ಕರ್ಣನಿಗೆ ಎಚ್ಚರ ನೀಡುವಾಗ ಕೌರವನ ಪತನ ಭೀಷ್ಮನ ಕಣ್ಣೆದುರಿಗೇ ಇತ್ತು. ತನ್ನ ಪಕ್ಷದ ವಿನಾಶದಿಂದ ಕೂಡಿದ ಇಂಥ ಯುದ್ಧವನ್ನು ತಪ್ಪಿಸಲು 'ಮಹೋನ್ನತಿಗೆ ನಿಲ್ಲುವ ಚಾರಿತ್ರ್ಯ, ವ್ಯಕ್ತಿತ್ವವಿದ್ದ ಭೀಷ್ಮ ಏನು ಮಾಡಿದ? ಅವನಿಗೆ ಹಿರಿಯನೆಂದು ಅನುಪಮ ಶೂರನೆಂದು ಆದರ ಸನ್ಮಾನವಿತ್ತು. ಅವನ ಮಾತನ್ನೂ, ಆಜ್ಞೆಯನ್ನೂ ಮೀರಿ ನಡೆಯುವವರಿರಲಿಲ್ಲ. ಆದರೂ ತನ್ನ ಅಧಿಕಾರ ಬಲವನ್ನು ಕೌರವನ ರಕ್ಷಣೆಗಾಗಿ ಉಪಯೋಗಿಸಿದ ವಿವಶತೆ ಯಾವುದು, ಭೀಷ್ಮ ಪ್ರತಿಜ್ಞೆಯ ನಂತರ ಆಯುಷ್ಯದೊಂದಿಗೆ ಉದ್ದಕ್ಕೂ ಬೆಳೆದ ನಿರ್ಲಿಪ್ತತೆಯೆ, ಹಸ್ತಿನಾಪುರದಲ್ಲಿ ಪಾಂಡವರೇ ಆಳಬೇಕೆಂಬ ಮನದ ಸುಪ್ತ ಆಶೆಯೇ? ಕರ್ಣನಲ್ಲಿ ಸೂತಪುತ್ರನೆಂಬ ಭೇದ ಭಾವವಿದ್ದುದು ಅವನು ಅರ್ಜುನನ ವಿರೋಧಿಯೆಂಬ ಕಾರಣದಿಂದ ಇರಬಹುದು. ಶಿಷ್ಟ ಸಮರ್ಥರ ಗುಂಪಿಗೆ ಶೂದ್ರನೊಬ್ಬ ಪ್ರವೇಶ ಮಾಡಿ ಒಡೆಯನ ನೆಚ್ಚಿಗೆ ಪಾತ್ರನಾದುದೂ ಪಕ್ಷ ಒಡೆಯಲು ಒಂದು ಕಾರಣ ಎಂದು ಕೆದಕುತ್ತಾನೆ. ಗಾಯಗೊಂಡು ಶರಶಯ್ಯೆಯಲ್ಲಿ ಮಲಗಿರುವಾಗ 'ಅಲ್ಲದೆಯುಂ ನೀನೆಮಗೆ ಕುಂತಿಯ ಗಾಂಧಾರಿಯ ಲೆಕ್ಕದೆ ಮೊಮ್ಮನೈ ನಿನ್ನನ್ನೇ ನೆಚ್ಚಿದ್ದಾನೆ ಕುರುಮಹೀಪತಿ' ಎಂದು ಎಂದೋ ಹೇಳಬೇಕಾದುದನ್ನು ಹೇಳುತ್ತಾನೆ. ಭೀಷ್ಮ ಪಾಂಡವರ ಪರವಾಗಿರುವುದು ಪಾಂಡವರಿಗೆ ಅನ್ಯಾಯವಾಗಿದೆ ಎಂದೋ, ಕೃಷ್ಣ ಆ ಕಡೆಗಿದ್ದಾನೆ ಎಂದೋ ಊಹಿಸುವುದು ಸುಲಭವಲ್ಲ. 'ಇಳಾಚಕ್ರ ಭಯಗೊಳ್ವಿನಂ ಚಕ್ರಿಯಂ ಪಿಡಿಯಿಪ್ಪಂ ಕರಚಕ್ರಮಂ' ಎಂಬಲ್ಲಿ ಕೃಷ್ಣನ ದೈವೀಕತೆಯನ್ನು ಭೀಷ್ಮ ಒಪ್ಪುವುದು, ಕುರುಪತಿಗೆ ದೈವಬಲವಿಲ್ಲವೆಂದು ಅಸಡ್ಡೆ ತೋರುವುದು ಕಾಣುತ್ತದೆ. ಅವನು ದುರ್ಯೋಧನನನ್ನು ಹಚ್ಚಿಕೊಂಡದ್ದೇ ಇಲ್ಲ. ಇದಕ್ಕೆ ದುರ್ಯೋಧನನ ದುಷ್ಕೃತನ ಕಾರಣವಾಗಿರಲಾರದು. ಶರಶಯ್ಯೆಯಲ್ಲಿ ಅವನು ಜಲಬೇಡಿದಾಗ ದುರ್ಯೋಧನನು ಹೊನ್ನ ಪಾತ್ರೆಯಲ್ಲಿ ತಂದು ಕೊಟ್ಟ. ಅದನ್ನು ನಿರಾಕರಿಸಿ ಅರ್ಜುನನ ಶರದ ಭೂಜಲವನ್ನೇ ಸೇವಿಸಿದ್ದು ಕೌರವನಿಗಾಗಿ ಅವನು ಅಷ್ಟೊಂದು ಯುದ್ಧ ಮಾಡಿದ್ದೇ ನಿರರ್ಥಕವೆನ್ನುವುದನ್ನು ತೋರಿಸುತ್ತದೆ.

ದ್ರೋಣಾಚಾರ್ಯರು ಅರ್ಜುನಪ್ರಿಯರು. ಅವನೇ ಅವರ ಪರಮಶಿಷ್ಯ. ದುರ್ಯೋಧನ ಮಾಡಿದ 'ಲೇಸು' (Favours) ಗಳ ಭಾರದಲ್ಲಿ ದಬ್ಬಿ ಹೋಗಿ, ತನ್ನ ಬಡತನವನ್ನೇ ನೆನೆಯುತ್ತ 'ಪತಿ ಸೇವೆ'ಯೆಂದು ಮಾತ್ರ ಯುದ್ಧ ಮಾಡಿದರು. ಅವರು ಆ ಯುದ್ಧದಲ್ಲಿ ನಿಷ್ಠೆಯನ್ನು ಆಸಕ್ತಿಯನ್ನು ತೋರಿಸಲೇ ಇಲ್ಲ. ತನ್ನ ಸೇಡನ್ನು ತೀರಿಸಿಕೊಟ್ಟ ಅರ್ಜುನನನ್ನು ಅವರು ಎದುರಿಸುವಂತಿರಲಿಲ್ಲ 'ಚಾಪವಿದ್ಯಾ ಬಲದೊಳ್' ಅವನನ್ನು ಮೂರು ಲೋಕದಲ್ಲಿ ಯಾರೂ ಮೀರಿಸಬಾರದೆಂದು ಏಕಲವ್ಯನಲ್ಲಿ ಗುರುದಕ್ಷಿಣೆ ಬೇಡಿದರು. ಕರ್ಣನನ್ನು ಕುಲಹೀನನೆಂದು ತಿರಸ್ಕರಿಸಿದರು. ಅವರು ತನ್ನ ಪಕ್ಷದ ಜಯಕ್ಕಾಗಿ ಯುದ್ಧ ಮಾಡಿದ್ದೇ ಇಲ್ಲ. ಅವರ ಮಗ ಕರ್ಣನನ್ನು ಸಹಿಸಲಾರದೆ ಜಗಳಾಡಿದ. ಶಲ್ಯ ಗಮಂಡಿಯೂ, ದುರಹಂಕಾರಿಯೂ ಆಗಿದ್ದು ಕರ್ಣನನ್ನು ಸಹಿಸುತ್ತಿರಲಿಲ್ಲ. ಅವನ ಸಾರಥಿಯಾಗಲು ಒತ್ತಾಯದಿಂದ ಒಪ್ಪಿಕೊಂಡು ಕರ್ಣ ಸಂಪೂರ್ಣವಾಗಿ ನಿರಾಯುಧನಾಗಿ ಸಾಯುವುದಕ್ಕೆ ಕಾರಣನಾದ.

ಕರ್ಣ ಮೊದಲು ಅರ್ಜುನನ ಸ್ಪರ್ಧೆಯಲ್ಲಿ, ತನ್ನ ಮಿತ್ರನಿಗಾಗಿ ಜೀವ ತೆರುವ ಸಂಕಲ್ಪ ಮಾಡಿದ್ದ. ಆದರೆ ಅವನು ತನ್ನ ಅಸ್ತಿತ್ವ (Identity) ವನ್ನೆ ಶೋಧಿಸುವುದರಲ್ಲಿ ಕಳೆದು ಹೋದ. ಎಲ್ಲರ ಅವಹೇಳನಕ್ಕೆ, ಸುಲಿಗೆಗೆ ಬಲಿಯಾಗಿ ಅಂತಃಕ್ಷತಿಗೆ ಒಳಗಾದ ಹುಟ್ಟಿನ ರಹಸ್ಯವನ್ನು ಕೃಷ್ಣ ಕಿವಿಗೆ ಹಾಕಿ ಅವನ ನೈತಿಕ ಬಲವನ್ನು ಸಂಪೂರ್ಣವಾಗಿ ಕೆಡಿಸಿದ. ಅಲ್ಲದೆ ಅವನು ಯುದ್ಧಕ್ಕೆ ಇಳಿದಾಗ ಕೌರವ ಪಕ್ಷ ಮುಕ್ಕಾಲು ಪಾಲು ನಾಶಗೊಂಡಿತ್ತು. ನಂತರ ಯುದ್ಧವನ್ನು ಜಯಿಸಿಕೊಡುವಷ್ಟು ಕರ್ಣನಲ್ಲಿ ಆತ್ಮಬಲ ಉಳಿದಿರಲಿಲ್ಲ. ಹೀಗೆ ದುರ್ಯೋಧನ ಪಕ್ಷವು ಪ್ರಬಲರಿಂದ ಕೂಡಿದ 'ಯುನೈಟೆಡ್ ಫ್ರಂಟ್' ಆಗಿಯೂ ದುರ್ಯೋಧನನ ದುರ್ಬಲ ಒಂಟಿ ಪಕ್ಷವಾಗಿ ಅಳಿಯಿತು. ಕೃಷ್ಣ ಕುಂತಿಗೆ ಹೇಳುವ ಒಂದು ಪದ್ಯದಲ್ಲಿ ಪಂಪ ಇದನ್ನು ಪುಷ್ಟಗೊಳಿಸಿದ್ದಾನೆ.

ಗುರುಕೃಪಶಲ್ಯ ಸಿಂಧುಸುತರಪ್ಪೊಡೆ ನಮ್ಮಯ ಪಕ್ಷ
ಗುರು ಸುತನೂ ನಮ್ಮ ಕಡೆಯ- ಗೆಲ
ಲ್ಕರಿಯನುಂ ಒಂದಿ ಬಾರದನುಂ ಅಂಕದ ಕಣನೆ
ಬೀರ ಚಾಗಂ ಅವನಿಂದ ಎಸೆದತ್ತು ಧಾತ್ರಿಯೊಳ್

'ದ್ರೋಣ, ಕೃಪ, ಶಲ್ಯ, ಭೀಷ್ಮ ಇವರೆಲ್ಲರು ನಮ್ಮ ಪಕ್ಷ, ಅಶ್ವತ್ಥಾಮನೂ ನಮ್ಮ ಕಡೆಯೇ, ಗೆಲ್ಲಲಿಕ್ಕೆ ಆಗದ, ನಮ್ಮ ಕಡೆಗೆ ಒಲಿಸಲು ಬಾರದ ಸಮರ ಶೂರನೆಂದರೆ ಕರ್ಣ ಮಾತ್ರ. ಶೌರ್ಯ ತ್ಯಾಗಗಳು ಧಾತ್ರಿಯಲ್ಲಿ ಅವನಿಂದ ಮೆರೆಯುತ್ತಿದೆ'

ಕೌರವರ ಪಕ್ಷದ ದೌರ್ಬಲ್ಯ ಮತ್ತು ಆಂತರಿಕ ಒಡಕನ್ನು ಸ್ಪಷ್ಟವಾಗಿ ಕೃಷ್ಣ ಕುಂತಿಗೆ ಹೇಳುತ್ತಾನೆ. ವಿದುರನ ಒಲವೇ ಆ ಕಡೆಗೆ, ವಿಚಾರ ಮಾಡದೆ ದುರ್ಯೋಧನನ ರಕ್ಷಣೆಗೆ ಇಟ್ಟಿದ್ದ ಬಿಲ್ಲನ್ನು ಅವನು ಮುರಿದು ಹಾಕುತ್ತಾನೆ.

## ಅಸ್ವಸ್ಥ ಮನಸ್ಸಿನ ಕರ್ಣ

'ಪಂಪ ತನ್ನ ಕೃತಿಯಲ್ಲಿ ತನ್ನ ಕಾಲದ ಆದರ್ಶ ವೀರನೊಬ್ಬನನ್ನು ಉಜ್ವಲೀಕರಿಸಿದ್ದಾನೆ. ಶಾಶ್ವತೀಕರಿಸಿದ್ದಾನೆ'.- ಡಾ. ಚಿದಾನಂದ ಮೂರ್ತಿಯವರು 'ಕರ್ಣಂಗೊಡ್ಡಿತ್ತು ದಲ್ ಭಾರತಂ' ಎಂದು ಪಂಪ ಹೇಳಿದ್ದನ್ನು ಸಮರ್ಥಿಸಿದ್ದಾರೆ. ಪಂಪ ಭಾರತದಲ್ಲಿ ಕರ್ಣನೆ ಪಂಪನ ಅರಿಕೇಸರಿ. ಸಂಪ್ರದಾಯ ಅಡ್ಡ ಬಾರದೇ ಇದ್ದರೆ ಕರ್ಣನಿಗೇ ತನ್ನ ರಸನನ್ನು 'ತಗುಳ್ಚಿ' ಕಾವ್ಯ ಬರೆಯುತ್ತಿದ್ದನೇನೋ. ಕುರುಕ್ಷೇತ್ರ ಯುದ್ಧವನ್ನು ಜಯಿಸಿದ ಪಕ್ಷದ ನಾಯಕನಂತಿರುವ ಕಿರೀಟಿಗೆ ಅರಿಕೇಸರಿಯನ್ನು ಹೋಲಿಸುವುದು ಅನಿವಾರ್ಯವಾಗಿತ್ತು. ಆದರೆ ಸಂದರ್ಭ ಸಿಕ್ಕಾಗಲೆಲ್ಲಾ ಹುಚ್ಚೆದ್ದು ಕರ್ಣನನ್ನು ಹೊಗಳಿದ. 'ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನ್ ಒಂದೆ ಚಿತ್ತದಿ ನೆನೆವೊಡೆ ಕರ್ಣನಂ ನೆನೆಯ....' ಎಂಬ ಬಹು ಪ್ರಸಿದ್ಧ ವೃತ್ತದಲ್ಲಿ ಕರ್ಣನ ಒಂದೊಂದೇ ಗುಣಗಳನ್ನು ಹೇಳಿ 'ಕರ್ಣನೊಳಾರ್ ದೊರೆ' ಎನ್ನುತ್ತ ಅವನನ್ನು ಹೋಲಿಕೆಯ ಪರಿಧಿಯಿಂದ ಹೊರ ತರುತ್ತಾನೆ. ಆಗ ನಮಗೆ 'ಅರಿಕೇಸರಿಯೊಳಾರ್ ದೊರೆ' ಎಂದೇ ಪಂಪ ಕೇಳಿದಂತಾಗುತ್ತದೆ. ತನ್ನ ಅರಸನ ಹಿರಿಮೆ- ಗರಿಮೆಗಳನ್ನೆಲ್ಲ ಅರ್ಜುನನಿಗಿಂತಲೂ ಕರ್ಣನಲ್ಲಿ ಪಂಪ ಕಂಡಿದ್ದಾನೆ. ಗುಣಗಾನದಲ್ಲಿ ಮೈಮರೆತು 'ಕರ್ಣ ರಸಾಯನಮಲ್ತೆ ಭಾರತಂ' ಎಂದು ನಿರ್ಣಯ ಹೇಳುತ್ತಾನೆ. ಅದು ಪ್ರತಿ ನಾಯಕರನ್ನು ನಾಯಕರನ್ನಾಗಿ ಚಿತ್ರಿಸುವ ಕಾಲವಾಗಿದ್ದರೆ ಕರ್ಣನೇ ಪಂಪ ಭಾರತದ ನಾಯಕ ಪಟ್ಟವನ್ನೇರುತ್ತಿದ್ದ. ಆದರೂ ಪಂಪ ಕರ್ಣನನ್ನು ವ್ಯಾಸ ಭಾರತದ ಮಿತಿಯಿಂದ ಹೊರತೆಗೆದಿದ್ದಾನೆ. 'ದುಷ್ಟಚತುಷ್ಟಯ'ರಲ್ಲಿ ಸೇರಿಸಿಕೊಂಡರೂ ಅವನ ಅಂತರಾತ್ಮದ ಕೂಗನ್ನು ಕೇಳಿ ಅವನ ಆತ್ಮ ಶೋಧನೆಯ ಕಾರ್ಯಕ್ಕೆ ತೊಡಗಿಸುತ್ತಾನೆ. ಠಾಗೋರರ ಕರ್ಣ, ಇರಾವತಿ ಕರ್ವೆಯ ಕರ್ಣ, ಶಿವಾಜಿ ಸಾವಂತರ 'ಮೃತ್ಯುಂಜಯ' ದಿನಕರರ 'ರಶ್ಮಿರಥಿ' ಕುಮಾರ ವ್ಯಾಸನ ಕರ್ಣ, ಬೆನೆಗಲ್ ಕರ್ಣ, ಭೈರಪ್ಪರ ಕರ್ಣ ಇವರೆಲ್ಲ ಕವಿಗಳು ಮಾನವೀಯ ಅಂತಃಕರಣವನ್ನು ಸ್ಪಂದಿಸಿ ಸ್ಫುರಿಸಿದ ಕರ್ಣರು. ಈ ಕಾರ್ಯವನ್ನು ಪಂಪ ಸಾವಿರ ವರ್ಷದ ಹಿಂದೆಯೇ ಮಾಡಿ ಕನ್ನಡಕ್ಕೆ ಅದ್ವಿತೀಯನಾಗಿದ್ದಾನೆ.

ಕರ್ಣ ಒಬ್ಬ ಹತಭಾಗ್ಯ. ಅನಾಥ. ಸಾಕು ತಂದೆ- ತಾಯಿಗಳಿದ್ದೂ ಅವನು ಬೇವಾರಸಿ. ಇದರ ಸಂಪೂರ್ಣ ಅರಿವು ಅವನಿಗೆ ಬಾಲ್ಯ ಕಾಲದಿಂದಲೇ ಉಂಟಾಗತೊಡಗಿತ್ತು. ಪಾಂಡವರ ಜೊತೆಯಲ್ಲಿ ಕಲಿಯುವಾಗಲೂ ಅವನನ್ನು ಎಲ್ಲರೂ ದೂರವಿಟ್ಟರು. ಬಾಲ್ಯದಲ್ಲಿಯೇ ಅವನು ಅನಾಥ ಪ್ರಜ್ಞೆಯ ಗೊಂದಲದಲ್ಲಿ ಅಂತರ್ಮುಖಿಯಾಗಿದ್ದ. ಸೂತಪುತ್ರನೆಂಬ ಹಣೆಪಟ್ಟಿಯನ್ನು ಹಚ್ಚಿ ವರಿಷ್ಠರು, ಅಂಬೇಡ್ಕರರನ್ನೋ, ಜಗಜೀವನರಾಮರನ್ನೋ ತುಚ್ಛೀಕರಿಸಿದ ಹಾಗೆ ಮನ ನೋಯಿಸಿದರು. ಈ ತುಚ್ಛೀಕಾರ ಅವನ ಮನಸ್ಸನ್ನು ರೋಗಗ್ರಸ್ತಗೊಳಿಸಿತು. ಅವನು ಮುಂದೆ ಉದ್ದಕ್ಕೂ ಮನೋರೋಗಿಯಾಗಿಯೇ ಕಾಲಕಳೆದ. ಇದರಿಂದ ಅವನ ಸ್ವಭಾವದಲ್ಲಿ ದುಡುಕು, ಸಿಡುಕುಗಳು ಕಾಣಿಸಿಕೊಂಡವು. ದುರ್ಯೋಧನನನ್ನು ಬಿಟ್ಟರೆ ಅವನನ್ನು ಆದರಿಸುವವರು ಯಾರೂ ಇರಲಿಲ್ಲ. 'ಕೌರವೇಶ್ವರನೊಲವು ತಪ್ಪಿಸೆ ಭುವನದೊಳೆನಗಾಪ್ತ ಜನವಿಲ್ಲ' - ಕುಮಾರವ್ಯಾಸ. ಇಡೀ ಪ್ರಪಂಚದಲ್ಲಿ ಒಬ್ಬನೇ ಮಿತ್ರನನ್ನು ಪಡೆದು ಅವನು ಧನ್ಯನಾಗದೆ ಋಣಿಯಾದನು. ಆ ಮೈತ್ರಿಯೂ

ಸ್ವಾರ್ಥದ ನೆರಳಿನಲ್ಲಿ ಬದುಕಿರುವುದರ ಸುಳಿವು ಅವನಿಗೆ ಸಿಕ್ಕಿದಾಗ ಗಾಯದ ಮೇಲೆ ಬರೆ ಎಳೆದಂತಾಯಿತು. 'ನನಗೆ, ಸಹದೇವನಿಗೆ ಉರಗಪತಾಕನಿಗೆ, ಕುಂತಿಗೆ, ಸೂರ್ಯನಿಗೆ ನೀನು ಕುಂತಿಯ ಮಗನೆಂದು ತಿಳಿದಿದೆ' ಎಂದು ಕೃಷ್ಣ ಭೇದದ ಬೀಜವನ್ನು ಬಿತ್ತಿದಾಗ 'ಕುರುಪತಿಗಿಲ್ಲ ದೈವಬಲ' ಗುರು, ಗುರುಪುತ್ರ ಸಿಂಧುಸುತರು ಅರ್ಧ ಮನಸ್ಸಿನವರೆಂದು ಗೊತ್ತಿದ್ದು 'ಎನ್ನನೆ ನಚ್ಚಿ ಪೆರ್ಚಿ ಮುಂ ಪೊರೆದನ್' ಎಂದು ಕೌರವನಿಗಾಗಿ ತನ್ನಲ್ಲಿಯೆ ಮರುಗಿದ. 'ನೀವೆನಗೆ ಇದನೇಕೆ ಪೇಳ್ದಿರೋ' ಎಂಬಂತೆ ಪ್ರಕಟವಾಗಿ ಸಂಕಟಪಟ್ಟ.

ಅವನ ವ್ಯಕ್ತಿತ್ವದ ಮೇಲೆ 'ಕಾನೀನ' ಎಂಬ ಕಳಂಕ ಹಚ್ಚಿಕೊಂಡಿತ್ತು ಅವನ ಪ್ರತಿಭೆಯನ್ನು ಕುಲದ ಪ್ರಶ್ನೆಯನ್ನೆತ್ತಿ ಪ್ರತಿಯೊಬ್ಬರೂ ಹೀನೈಸಿದರು. ಭೀಷ್ಮ, ದ್ರೋಣ, ಅಶ್ವತ್ಥಾಮ, ದ್ರೌಪದಿ ಎಲ್ಲರೂ ಮನಸ್ಸನ್ನು ಕ್ಷಣಕ್ಷಣಕ್ಕೂ ಕ್ಷತಿಗೊಳಿಸುವ ಪರಿಸ್ಥಿತಿಯಲ್ಲಿ ಕರ್ಣ ಬದುಕಿ ಪರಿಸ್ಥಿತಿಯ ದಾಸನಾದ. ದುಷ್ಟರ ಸಂಪರ್ಕದಲ್ಲಿ ಅವನೂ ದುಷ್ಟನೆನ್ನಬಹುದಾದ ಕಾರ್ಯಕ್ಕೆ ಕೈ ಹಾಕಿದ. ಮಿತ್ರನ ಸಲುವಾಗಿ ಶಕುನಿಯನ್ನವನು ಎಂದೂ ಸಹಿಸಲಿಲ್ಲ. 'ಕುಲಂಕುಲಮಲ್ತು' ಎಂದು ದ್ರೋಣರಿಗೆ ಉತ್ತರಕೊಟ್ಟಿದ್ದು ತರ್ಕಕ್ಕಾಗಿ ಮಾತ್ರ. ಅವನಿಗೆ ಸಮಕಾಲೀನ ವರ್ಣಭೇದದ ಸತ್ಯಾಂಶದ ಸರಿಯಾದ ಕಲ್ಪನೆಯಿತ್ತು. ತನ್ನನ್ನು 'ಸೂತಪುತ್ರ'ನೆಂದೇ ಈ ಸಮಾಜ ಸ್ವೀಕರಿಸಿದ್ದು, ಯಾವ ರಾಜವಂಶದವರೂ ತನಗೆ ಹೆಣ್ಣು ಕೊಡಲು ಮುಂದಾಗದಿದ್ದುದು, ವಿದುರ, ಏಕಲವ್ಯ ಮೊದಲಾದವರು ಸಮಾಜದಲ್ಲಿ ಪಡೆದ ಸ್ಥಾನ - ಮಾನ ಎಲ್ಲವೂ ಅವನ ಕಣ್ಣೆದುರಿಗಿತ್ತು. ಆದರೆ ತನ್ನಲ್ಲಿ ಹುಟ್ಟಿನಿಂದಲೆ ಅಮೋಘವಾಗಿರುವ ಯಾವುದೋ ಪ್ರಭೆ ಅವರನ್ನು ಒಂಟಿಯಾಗಿ ತಾನು ಯಾರೆಂದು ತನ್ನನ್ನೇ ಶೋಧಿಸಲು ಹಚ್ಚಿತ್ತು. ಇದರಿಂದ ಅವನು ಒಂದು ಬಗೆಯ ಅಂತರ ದ್ವಂದ್ವಕ್ಕೆ ಸಿಲುಕಿ ತನ್ನ ಅಸ್ಮಿತೆಯನ್ನು ಕಳೆದುಕೊಂಡಿದ್ದ. ಅವನನ್ನು ಎಲ್ಲರು ಸುಲಿಗೆಗೆ ಒಳಪಡಿಸಿ ದುರ್ಬಲಗೊಳಿಸಿದರು. ಅವನಿಂದಾದ ಅನ್ಯಾಯಕ್ಕಿಂತ ಅವನ ಮೇಲಾದ ಅನ್ಯಾಯದ ಪ್ರಮಾಣವೇ ಹೆಚ್ಚೆಂದು (He was more sinned against than sinning) ಭಾಸವಾಗುತ್ತದೆ. ಈ ಸಂದರ್ಭಗಳು ಪಂಪ ಭಾರತದಲ್ಲಿ ಹಲವಾರೆಡೆ ಬಂದಿದೆ. ವಿದ್ಯಾ ಪರೀಕ್ಷೆಯಲ್ಲಿ ಗುರು ದ್ರೋಣಾಚಾರ್ಯ ಅವನನ್ನು ಕುಲಹೀನ ಎಂದರು. ದ್ರೌಪದಿ ಕುಲಹೀನನೆಂದು ತಿರಸ್ಕರಿಸಿದಳು. ಪರಶುರಾಮ ಅನ್ಯಾಯವಾಗಿ ಶಪಿಸಿದರು. ಕೃಷ್ಣ ಜನ್ಮ ರಹಸ್ಯ ಹೇಳಿ ಅವನ ಸಂಕಲ್ಪವನ್ನು ಒಡೆದ. ತಾಯಿ ಕುಂತಿಯೂ ಬೇಡಿ ಕಾರ್ಯ ಸಾಧಿಸಿದಳು. ದುರ್ಯೋಧನ ಗೆಳೆತನದಲ್ಲಿ ಮೋಸ ಮಾಡಿದ. ಇಂದ್ರ, ಶಲ್ಯ, ಭೀಷ್ಮ, ಅಶ್ವತ್ಥಾಮ ಎಲ್ಲರೂ ಎಸಗಿದ ಅನ್ಯಾಯದಿಂದ ಅವನು ಜರ್ಝರಿತನಾದ. ಶಕ್ತಿಗುಂದಿದ. 'ದೈವಮನಾರಯ್ಯ ಮೀರಿ ಬಾಳಲ್ ನೆರೆವರ್' ಎಂದು ಹತಾಶನಾದ. 'ಬಿದಿವಸದಿಂದ ಪುಟ್ಟುವುದು, ಪುಟ್ಟಿಸುವಂ ಬಿದಿ. ಬಿದಿ ಸಮಕಟ್ಟಿಕೊಟ್ಟೊಡೆ ಕಿಡಿಸಲ್ ಕುಡಿಸಲ್ ಸಮರ್ಥರಾರ್' ಎಂಬ ಉದ್ಗಾರದಲ್ಲಿ ಅವನ ಅವಸಾನದ ಶಬ್ದ ಚಿತ್ರ ಕಾಣಿಸುತ್ತದೆ. ಕೃಷ್ಣನನ್ನು ಅವನೆಂದೂ ಅನಾದರಿಸಲಿಲ್ಲ. ಅವನಲ್ಲಿಯ ದೈವಿಕತೆಯನ್ನು ಮನಗಂಡಿರಬೇಕು. ಕೃಷ್ಣನ ನಿಮಿತ್ತದಿಂದಲೆ ಅವನ ಅವಸಾನವಾಯಿತು. ಕರ್ಣನ ಯೋಗ್ಯತೆಯನ್ನು ಕೃಷ್ಣ ಕುಂತಿಗೆ ಹೇಳುತ್ತಾನೆ. 'ಅಖಿಳಾಸ್ತ್ರ ವಿಶಾರದನಪ್ಪನುಂ ಗೆಲ್ಲಲ್ಕರಿಯನು ಒಂದಿಬಾರದನುಂ ಅಂಕದ ಕರ್ಣನೆ, ಬೀರಂ ಆತನಿಂದ ಉರಿವರಿದತ್ತು. ಚಾಗಂ ಅವನಿಂದ ಎಸೆದತ್ತು ಸಮಸ್ತ ಧಾತ್ರಿಯೊಳ್' ಆದ್ದರಿಂದ ಕುಂತಿಯನ್ನು 'ಕಾರ್ಯಸಾಧಿಸಲು' ನೀನು ಅವನಲ್ಲಿಗೆ ಹೋಗೆಂದು ನೇಮಿಸುತ್ತಾನೆ. ಅವಳು ತಾಯಿಯಾದುದರಿಂದ ಆ ಕೆಲಸ ಸಾಧ್ಯ. ಕರ್ಣ ಅರ್ಜುನ ದ್ವೇಷಿಯಲ್ಲ. ಅರ್ಜುನನ ಪ್ರತಿ ದ್ವಂದ್ವಿಯಾಗಿದ್ದ. ಧನುರ್ವಿದ್ಯಾ ಪರೀಕ್ಷೆಯ ದಿನ ಅವನಲ್ಲಿ ಪ್ರತಿ ಸ್ಪರ್ಧೆಯ ಭಾವನೆ ಹುಟ್ಟಿತ್ತು. ಮುಂದೆ ಇದು ಪ್ರತಿಕೂಲ ಸಂದರ್ಭಗಳಲ್ಲಿ ಗಾಢವಾಯಿತು. ಅರ್ಜುನನನ್ನು ಎಲ್ಲರ ಸಮಕ್ಷಮದಲ್ಲಿ ಸೋಲಿಸಿ ಅವನ ಅಹಂಕಾರವನ್ನು ಮುರಿಯುವ ಹಂಬಲ ಅವನದಾಗಿತ್ತು. ಆದರೆ ಅವನು ವಿಧಿಯ ಕೈಗೊಂಬೆಯಾದ. ಕವಿ ಮೆಚ್ಚಿದ ಅಸ್ವಸ್ತ ಮನಸ್ಸಿನ ದುರಂತ ಪ್ರತಿನಾಯಕನಾದ.

## ಲೋಕಪೂಜ್ಯನಲ್ಲದ ಕೃಷ್ಣ

ಪಂಪ ಭಾರತದ ನಾಯಕ ಕಿರೀಟಿಗೆ ತಗುಳ್ಚಿದ ಅರಿಕೇಸರಿ. ಆದರೆ ಕವಿಯ ಧ್ಯಾನ ವಿಶೇಷವಾಗಿ ಕರ್ಣನಲ್ಲಿ, ದುರ್ಯೋಧನನಲ್ಲಿ, ಕೃಷ್ಣನಲ್ಲಿ ಸಹ. ಹಲ ಕೆಲವು ಪದ್ಯಗಳ ಮೂಲಕ ಅರ್ಜುನನ ಹೊಗಳಿಕೆ ಬರುತ್ತದೆ. ಮಹತ್ವದ ಕಾರ್ಯವನ್ನು ಮಾಡುವಲ್ಲಿ ಕೃಷ್ಣನ ಹಾಜರಿ ಅಗತ್ಯವಾಗಿ ಇರುತ್ತದೆ. ಕೊನೆಯಲ್ಲಿ ಕರ್ಣನನ್ನು ಕೊಲ್ಲುವಾಗಲೂ 'ನೀನ್ ಎನ್ನ ಕಜ್ಜದೊಳ್ ಎಸಗು' ಎಂದು 'ಯೋಚಿಸಿದನ್ ಕದನ ತ್ರಿಣೇತ್ರನನ್'. ಸುಭದ್ರೆಯನ್ನು ಹೊರಗಿನಿಂದ ತಂದು ನಾಯಕಿ ಪಟ್ಟಕ್ಕೇರಿಸುವಾಗಲೂ ಅರ್ಜುನ ಪಂಪ ಭಾರತದ ನಾಯಕನೇ ಎಂಬ ಸಂದೇಹ ಮೂಡುತ್ತದೆ. ತನ್ನ ಅಣ್ಣ ಧರ್ಮರಾಯನ ಕುರಿತಾದ ಅವನ ಅಸಹನೆ ನಾಯಕ ಯೋಗ್ಯವಾಗಿಲ್ಲ. ಇಲ್ಲಿಯೂ ಪಂಪಭಾರತದ ನಾಯಕನೇ ಎಂಬ ಸಂದೇಹ ಮೂಡುತ್ತದೆ. ಪಂಪ ವ್ಯಾಸ ಭಾರತದ ಅರ್ಜುನನಿಗಿಂತ ತನ್ನ ಅರ್ಜುನನನ್ನು ಅರಿಕೇಸರಿಯಾದುದರಿಂದ ಹೆಚ್ಚು ಸಭ್ಯನನ್ನಾಗಿ ಚಿತ್ರಿಸಿದ್ದಾನೆ. ವ್ಯಾಸ, ಕುಮಾರವ್ಯಾಸರಂತೆ ಕೃಷ್ಣ ಪಂಪನ ಆರಾಧ್ಯ ದೇವತೆಯಲ್ಲ. ಪಂಪ ಮೂಲತಃ ಜೈನ, ಭಾರತದ ಕತೆಯನ್ನು ಅಲೌಕಿಕತೆಯಿಂದ ಲೌಕಿಕಕ್ಕೆ ಇಳಿಸಿ ವರ್ಣಿಸುವಾಗ ಅವನು ವ್ಯಾಸ ಭಾರತದ ಒಳ್ಳೆಯ ವಿಮರ್ಶಕನಾಗುತ್ತಾನೆ. ಉತ್ತಮ ಸಂಗ್ರಾಹಕನಾಗುತ್ತಾನೆ. 'The greatest genious is the most indebted man' ಹಾಗೂ ಈ ಕಾವ್ಯವನ್ನವನು ತನ್ನರಸನ ಸಂತೋಷಕ್ಕಾಗಿ ಬರೆದಿದ್ದಾನೆ ಎನ್ನುವುದು ಮುಖ್ಯ. ಕೃಷ್ಣನನ್ನು ಲೋಕಪೂಜ್ಯರ ಪಟ್ಟಿಯಲ್ಲಿ ಸೇರಿಸದಿರಲು ಇವು ಸಾಮಾನ್ಯ ಕಾರಣಗಳಾಗಿರಬಹುದು.

ಪಂಪ ಕೃಷ್ಣನನ್ನು ಎರಡು ನೆಲೆಯಲ್ಲಿ ಚಿತ್ರಿಸಿದ್ದಾನೆ. ಒಂದು ದೈವ ಸಂಭೂತನಾದ ಶ್ರೀ ಕೃಷ್ಣ. ಇನ್ನೊಂದು ಕುಟಿಲ ರಾಜಕಾರಣಿ ಕೃಷ್ಣ. ಶ್ರೀ ಕೃಷ್ಣ ಪಾಂಡವರ ಸಖ ಮಾತ್ರವಲ್ಲ. ಅವರ ಪಕ್ಷದ ದೈವಬಲ. ಮತ್ತು ಸಂರಕ್ಷಕ ದೇವರು (Protector). ಅವತಾರ ಪುರುಷ, ಮೂಲ ಭಾರತದಲ್ಲಿ ಬರುವ ಎಲ್ಲಾ ಬಿರುದುಗಳನ್ನೂ ಪಂಪ ಅವನಿಗೆ ಸಲ್ಲಿಸಿದ್ದಾನೆ. ಅವನ ಅವತಾರಗಳನ್ನು ಹೇಳಿದ್ದಾನೆ. ಗೀತಾ ಪ್ರವಚನದಲ್ಲಿ ಕೃಷ್ಣ ಕರ್ಮಯೋಗವನ್ನು ಅರ್ಜುನನಿಗೆ ವಿವರಿಸುತ್ತಾನೆ. ಧೃತರಾಷ್ಟ್ರ ದುರ್ಯೋಧನರಿಗೆ ತನ್ನ ದಿವ್ಯ ಸ್ವರೂಪವನ್ನು ತೋರಿಸಿದ್ದಾನೆ. ಕೃಷ್ಣ ತನ್ನ ಸಭೆಗೆ ಬರುವಾಗ ದುರ್ಯೋಧನ.

**'ಲೋಕಗುರು ಶಂಕಚಕ್ರಗ**
**ದಾಕರನತಿಶಯ ಚತುರ್ಭುಜಂ ಜನಜನಿತ**
**ವ್ಯಾಕುಳದೆ ಬಂದನೆಂದೊಡೆ**
**ಲೋಕದೊಳಿನ್ನೆನ್ನದೊರೆಗೆ ಸಿರಿಯರುಮೊಳರೇ'**

ಎಂಬ ಧನ್ಯತೆಯನ್ನು ವ್ಯಕ್ತಮಾಡಿ ಶ್ರೀ ಕೃಷ್ಣನ ದೈವೀಕತೆಯನ್ನು ಒಪ್ಪುತ್ತಾನೆ. ಭೀಷ್ಮ ಅಗ್ರಪೂಜೆಗೆ ಕೃಷ್ಣನೇ ಪಾತ್ರನೆಂದು ಹೇಳುತ್ತಾನೆ. ಪಂಪನ ಮತದಂತೆ ಶ್ರೀ ಕೃಷ್ಣ 'ಅಜ'- ಅನಂತ. ಜನ್ಮ ರಹಿತನಾದ ದೇವರು. ಅವನು ಪನ್ನಗ ಶಯನ, ಬಲಿಬಂಧನ, ಮಧು ಕೈಟಭಾರಿ. ಇಂಥಾ 'ಅಲೌಕಿಕ ಪುರುಷೋತ್ತಮ' ನನ್ನು ತಾನು ಅಂತಃ ಕರಣದಲ್ಲಿ ಜೈನನಾಗಿ ತನ್ನ ಲೌಕಿಕ ಕಾವ್ಯದ ಲೋಕ ಪೂಜ್ಯತೆಯ ಪಟ್ಟಿಗೆ ಸೇರಿಸಿಕೊಳ್ಳುವುದು ಹೇಗೆ ?

ಕೃಷ್ಣನನ್ನು ಒಬ್ಬ ಕುಟಿಲ ರಾಜಕಾರಣಿಯನ್ನಾಗಿ ಪಂಪ ಹೆಚ್ಚು ಸಾವಧಾನದಿಂದ ಚಿತ್ರಿಸಿದ್ದಾನೆ. ಮಹಾಭಾರತ ಮುಖ್ಯವಾಗಿ ಸಮರಗಾಥೆ. ಪಂಪನ ಕಾಲದ ಗುಣ ಧರ್ಮವೂ ಇದೇ ಇದ್ದಿರಬೇಕು. ಅನೇಕ ಯುದ್ಧಗಳನ್ನು ಜಯಿಸಿ ಸಮರಮಲ್ಲನೆಂದು ಬಿರುದಾಂಕಿತನಾದ ಅರಿಕೇಸರಿಯ ಮಿತ್ರನೂ ಕುಶಲ ರಾಜಕಾರಣಿಯಾಗಿರಲೇ ಬೇಕಲ್ಲ. ಸುಭದ್ರೆಯ ಸಂದರ್ಭದಿಂದ ಪ್ರಾರಂಭವಾದ ಕೃಷ್ಣ ಅರ್ಜುನ ಗೆಳೆತನ ಪಾಂಡವ ಪಕ್ಷದ ಸಂಪೂರ್ಣ ರಾಜನೀತಿಯನ್ನು ನಿಯಂತ್ರಿಸುತ್ತದೆ. ಪಂಪನಲ್ಲಿ ಇದು ಸಮರ್ಥವಾಗಿ ಬಂದಿದೆ. ಕುಂತಿ ಕೃಷ್ಣನ ಸೋದರತ್ತೆ ಹಾಗೂ ಅರ್ಜುನ ಅವನ ಭಾವ ಮೈದುನ. ತಮ್ಮಿಬ್ಬರ ನೈತಿಕ ಸಂಬಂಧ ಪುರಾತನವಾದುದೆಂದು ಕೃಷ್ಣ ಅರ್ಜುನನಿಗೆ ತಾನೇ ಹೇಳುತ್ತಾನೆ. ಇಂಥದರಲ್ಲಿ ಯಾದವ ಪ್ರಮುಖನಾದ ಅವನು ತಮ್ಮವರ ಸಂರಕ್ಷಕನೂ ಆಗಿದ್ದ. ಕೌರವರ ಮೇಲೆ ಅವನಿಗೆ ದ್ವೇಷವಿರಲಿಲ್ಲವೆಂದು ಕಾಣುತ್ತದೆ. ಅವರ ವಿನಾಶವನ್ನು ಮಾತ್ರ ಅವನು ಬಯಸಿದ. ಅವರು ಪಾಂಡವರಿಗೆ ಮಾಡಿದ ಅನ್ಯಾಯ ಅಕ್ಷಮ್ಯವೆಂದು ಅವನ ಸಮರ್ಥನೆ. ಮುಂದಕ್ಕೆ ಅರ್ಜುನನ್ನು ಹಸ್ತಿನಾಪುರದ

ಚಕ್ರವರ್ತಿಯನ್ನಾಗಿ ಮಾಡುವುದು ಅವನ ಉದ್ದೇಶವಾಗಿದ್ದಿರಬಹುದು. ಇದರಿಂದ ತನ್ನ ರಾಜ್ಯದ ಸಂರಕ್ಷಣೆ ಹಾಗೂ ಕುರುರಾಜ್ಯದ ಮೇಲೆ ತನ್ನ ವರ್ಚಸ್ಸು ಸರ್ವತ್ರ ಸದಾಕಾಲ ಉಳಿಯುವುದೆಂದು ಅವನ ಲೆಕ್ಕಾಚಾರವಿದ್ದಿರಬಹುದು. ಅದಕ್ಕಾಗಿ ಅವನು ಕುರುಕ್ಷೇತ್ರ ಯುದ್ಧವನ್ನು ಪಾಂಡವರ ಪಕ್ಷದ ಕಡೆಗೆ ತಿರುಗಿಸುವುದಕ್ಕಾಗಿ ರಾಜನೀತಿಯನ್ನು ನಡೆಸಿದ. ಇದರ ಸ್ಪಷ್ಟ ಚಿತ್ರಣ ಈ ಪದ್ಯದಲ್ಲಿದೆ.

ಗುರುಕೃಪ ಶಲ್ಯ ಸಿಂಧುಸುತರಪ್ಪೊಡೆ ಸಮ್ಮಯ ಪಕ್ಷ ದೊಂದಿದಂ
ಗುರುಸುತ ನೀಗಳೆಮ್ಮೊಳಾಖಿಳಾಸ್ತ್ರ ವಿಶಾರದನುಂ
ಲ್ಕರಿಯನುಂ ಜಂದಿಬಾರದನುಂ ಅಂಕದರ್ಕಾನೆ ಬೀರಂ ಆತನಿಂದ
ಉರಿವರಿದತ್ತು ಚಾಗಂ ಅವನಿಂದ ಎಸೆದತ್ತು ಧಾತ್ರಿಯೊಳ್

ಕೌರವನ ಕಡೆಯಿಂದ ಯುದ್ಧ ಮಾಡುವ ಮಹಾರಥಿಗಳಾದ ದ್ರೋಣ, ಕೃಪಾಚಾರ್ಯ, ಶಲ್ಯ, ಭೀಷ್ಮ, ಅಶ್ವತ್ಥಾಮ ಇವರೆಲ್ಲ ನಮ್ಮ ಪಕ್ಷ. ಗೆಲ್ಲಲಿಕ್ಕೆ ಶೋಭಿಸಲಿಕ್ಕೆ ಆಗದವನು ಕರ್ಣ ಮಾತ್ರ. ಅವನು ಮಹಾ ತ್ಯಾಗಿ. ನೀನಲ್ಲಿಗೆ ಹೋಗಿ 'ಕಾರ್ಯ ಸಾಧಿಸು' ಎಂದು ಕೃಷ್ಣ ಕುಂತಿಗೆ ಹೇಳುತ್ತಾನೆ. ತಾನೇ ಅವನ ಮನೆಗೆ ಮೊದಲ ಬಾರಿಗೆ ಬಂದು ಸಲಿಗೆ ತೋರಿಸುತ್ತಾನೆ. 'ಭೇದಿಸಲೆಂದೆ ದಲ್‌ನುಡಿದರೆನ್ನದಿರ್' ಎಂದು ಜನ್ಮ ರಹಸ್ಯ ಬಿತ್ತರಿಸಿ ಒಡಕನ್ನು ಹುಟ್ಟಿಸುತ್ತಾನೆ. ಸ್ವಾಮಿನಿಷ್ಠನೂ, ದುಃಖಿಯೂ ಆದ ಒಬ್ಬ ಆದರ್ಶ ವೀರನ ಆತ್ಮಬಲವನ್ನು ಮುರಿಯುವ ಕುಟಿಲ ರಾಜನೀತಿ ಇದುವೆ. ಸಂಧಾನಕ್ಕೆಂದು ಪಾಂಡವರ ರಾಯಭಾರಿಯಾಗಿ ಬಂದವನು ವಿದುರನ ಮನೆಗೆ ಮೊದಲು ಹೋಗಿ ಕೂಳುಂಡು ಬರುವ ಅಗತ್ಯವಿರಲಿಲ್ಲ. ಕೃಷ್ಣನ ಸಾದರ ಸ್ವಾಗತಕ್ಕೆ ಅಣಿಯಾಗಿದ್ದ ದುರ್ಯೋಧನನನ್ನು ಕೆರಳಿಸಿ ಅವನ ರಕ್ಷಣೆಗಾಗಿ ವಿದುರನಿಟ್ಟಿದ್ದ ಆಯುಧವನ್ನು ನಾಶಗೊಳಿಸುವ ಉದ್ದೇಶ ಅದಾಗಿತ್ತು. ಅಲ್ಲದೆ ಕರ್ಣನನ್ನು ಕೊಲ್ಲುವಲ್ಲಿ 'ಭೇದದೊಳಲ್ಲದೆ ಗೆಲಲರಿದು ಸಿಂಧುಸತನನ್' ಎಂದು ಭೀಷ್ಮನ ಪತನದಲ್ಲಿ, ದ್ರೋಣರ ಅವಸಾನದಲ್ಲಿ ಅವನ ರಾಜನೀತಿಯನ್ನು 'ಡೊಂಬರಾಟ' ವೆಂದು ಕರೆದ ಶಿಶುಪಾಲ ವಧೆಯಲ್ಲಿ, ಅರ್ಜುನನ ಸಾರಥಿಯಾಗುವಲ್ಲಿ ಕೃಷ್ಣ ಕುಶಲ ರಾಜಕಾರಣಿಯಾಗಿ ಕಾಣುತ್ತಾನೆ. ಭೇದದಿಂದ ಪ್ರಬಲ ವಿಪಕ್ಷವನ್ನು ಒಡೆದು ದುರ್ಬಲಗೊಳಿಸಿದ ನಂತರ ದಂಡ ಪ್ರಯೋಗ ಮಾಡುವ ರಾಜನೀತಿ ಅಂದಿನದಾಗಿರಬೇಕು. ಇದೂ ಅಲ್ಲದೆ ಭೀಷ್ಮ ಹೇಳುವ ಹಾಗೆ 'ಭಾರತಂ ಕಲಹಂ, ಇದಿರ್ಚುವನ್ ಹರಿಗನ್'. ಇದೊಂದು ದಾಯಾದಿಗಳ ರಾಜ್ಯ ಕಲಹ. ನೇರವಾಗಿ ಇದರೊಳಗಿದ್ದು ತಮ್ಮ ಕರ್ತವ್ಯವನ್ನು ಮೆರೆದವರಿಂದಲೆ ಈ 'ಯುದ್ಧ ವರ್ಣನೆಯ ಕಾವ್ಯ' ಲೋಕ ಪೂಜ್ಯವಾಯಿತೆಂದು ಹೇಳಿ, ಮಧ್ಯಸ್ಥನಾಗಿ ಬೇರೆ ಬೇರೆ ಬಗೆಯಲ್ಲಿ ಒಂದು ಪಕ್ಷಕ್ಕೆ ಸಹಾಯ ಮಾಡಿದ 'ಹೊರಗಿನವ'ನಾದ ಕೃಷ್ಣನನ್ನು 'ಲೋಕ ಪೂಜ್ಯತೆಗೆ' ಕಾರಣರಾದವರ ಪಟ್ಟಿಯಲ್ಲಿ ಸೇರಿಸಿಕೊಳ್ಳುವುದು ಸೂಕ್ತವಲ್ಲವೆಂದೇ ಪಂಪನಿಗೆ ಅನಿಸಿರಬೇಕು.

## ಅಗಲಿಕೆ

ಮಾತೃ ಸಮಾನರಾದ ಡಾ. ಶ್ರೀಮತಿ ಸುನೀತಾ ಶೆಟ್ಟಿ ಅವರು ಸಮಸ್ತ ಮುಂಬಯಿಯ ಜನತೆಯ ಹೃದಯಗೆದ್ದ ಕೆಲವೇ ಕೆಲವು ತುಳು ಕನ್ನಡಿಗರಲ್ಲಿ ಒಬ್ಬರು. ಅವರು ಮೈಸೂರು ಅಸೋಸಿಯೇಶನ್ನಿನ ಅಜೀವ ಸದಸ್ಯೆ ಮತ್ತು ಈ ಸಂಸ್ಥೆಯ ಎಲ್ಲ ಆಗುಹೋಗುಗಳಲ್ಲಿ ಅತೀ ಪ್ರೀತಿಯಿಂದ ಭಾಗವಹಿಸುತ್ತಾರೆ. ಇತ್ತೀಚೆಗೆ ಅಸೋಸಿಯೇಶನ್‌ನ ಭಾದ್ರಪದ ಗೌರಿ ಗಣೇಶ ಮಹೋತ್ಸವದ ಅಂಗವಾಗಿ ಸೇವಾರ್ಥ ನೀಡಲು ಬಂದಿದ್ದಾಗ "ಪೂಜೆಗೆ ಬರಲಾಗುವುದಿಲ್ಲ ಮನೆಯವರಿಗೆ ಅಷ್ಟು ಆರೋಗ್ಯ ಸರಿಯಿಲ್ಲ" ಎಂದಿದ್ದರು. ಆದರೆ ಇಷ್ಟು ಬೇಗ ಶ್ರೀ ಮಹಾಬಲ ಶೆಟ್ಟರು ಇಹಲೋಕವನ್ನು ತ್ಯಜಿಸುತ್ತಾರೆ ಎಂಬ ಅರಿವು ನಮಗೆ ಆಗಲಿಲ್ಲ. ಹಿರಿಯರು 90 ವರ್ಷದ ತುಂಬು ಜೀವನ ನಡೆಸಿ ಬಾಳನ್ನು ಸಾರ್ಥಕಗೊಳಿಸಿಕೊಂಡಿದ್ದರು. ಅವರ ಅಗಲಿಕೆ ಅವರ ಕುಟುಂಬಕ್ಕಷ್ಟೇ ಅಲ್ಲ, ಅಪಾರ ಬಂಧುಬಳಗಕ್ಕೆ ಸ್ನೇಹಿತರಿಗೆ ತುಂಬಲಾರದ ನಷ್ಟವೇ ಸರಿ.

ಭಗವಂತ ಅವರಿಗೆ ಸದ್ಗತಿಯನ್ನೂ, ಸುನೀತಕ್ಕನವರಿಗೂ, ಮಕ್ಕಳಿಗೂ ಧೈರ್ಯ ಸ್ಥೈರ್ಯವನ್ನೂ ನೀಡಲೆಂದು ಹಾರೈಸುತ್ತೇವೆ.

**ಮೈಸೂರು ಅಸೋಸಿಯೇಶನ್ ಮುಂಬಯಿ**

**ಜೀವಿ ವಚನ**

## ಮಿತ್ರಾಯನಮಃ

೧

ಊರೂರಿಗೆ ಒಂದು ಮನೆ ಇರಬೇಕು ಎನ್ನುತ್ತಾರೆ. ಆದರೆ ಅದು
ಈ ಕಾಲದಲ್ಲಿ ಸಾಧ್ಯವಾಗಲಿಕ್ಕಿಲ್ಲ; ಕಾಲ ಬದಲಾಗಿದೆ, ಎನ್ನಬೇಡಿ.
ಊರಿಗೊಂದು ಮಿತ್ರನ್ನ ಪಡೆಯಬಹುದಲ್ಲ? ಪ್ರಯತ್ನಿಸಿ ನೋಡಿ
ನೀವು ಉತ್ತಮರಾದರೆ, ಉತ್ತಮರು ನಿಮ್ಮನ್ನು ಅರಸಿ ಬರುತ್ತಾರೆ.

೨

ಮಿತ್ರರಲ್ಲಿ ಎರಡು ವಿಧ, ಒಂದು ಬಗೆಯ ಮಿತ್ರರು ಸಮಯಸಾಧಕರು
ಹೊಗಳುಭಟ್ಟರು, ತಮ್ಮ ಬೇಳೆ ಬೇಯಿಸಿಕೊಂಡು ಲಾಭಪಡೆವವರು
ಇನ್ನೊಂದು ಬಗೆಯ ಮಿತ್ರರು, ಅಪ್ರಿಯ ಸತ್ಯ ನುಡಿದು ಬುದ್ಧಿಹೇಳುವರು
ನಿಮ್ಮ ತಪ್ಪುಗಳಿಗೆ ತಮ್ಮ ಹೃದಯದ ಕನ್ನಡಿ ಹಿಡಿದು ದಾರಿತೋರುವವರು.

೩

ಗೆಳೆಯ ಎಂಥವನಿರಬೇಕೆಂದರೆ, ಅವನು??ಆಪತ್ಬಾಂಧವನಾಗಿರಬೇಕು
ಗೆಲವುಸೋಲು, ಮಾನಾಪಮಾನ, ಲಾಭಹಾನಿಗಳಲ್ಲಿ ಜೊತೆಗಿರಬೇಕು
ಕಷ್ಟಕಾಲದಲ್ಲಿ ಸದಾ ನಿಮ್ಮನ್ನು ರಕ್ಷಿಸಬೇಕು, ಹಿತೈಷಿಯಾಗಿರಬೇಕು
ಅರ್ಜುನನ ಸಖನಂತೆ, ಅವನು ನಿಮ್ಮ ಜೀವನರಥವ ಓಡಿಸಿರಬೇಕು.

೪

ನೀವು ಸುಖದಲ್ಲಿ ತಲ್ಲೀನರಾದಾಗ ದೂರದಿಂದ ನೋಡುತಿದ್ದರು ಕೂಡ
ಕಷ್ಟಕಾಲದಲ್ಲಿ ಧಾವಿಸಿ ನಿಮ್ಮೆಡೆಗೆ ಬರುವವನೆ ನಿಜಮಿತ್ರ, ಪರಮಮಿತ್ರ.
ನಿಮ್ಮ ಸುಖ ವರ್ಧಿಸುವ, ದುಃಖವನು ಅರ್ಧಿಸುವ ಮಿತ್ರನೆ ನಿಜಮಿತ್ರ
ಅಂಥ ಮಿತ್ರರನ್ನು ಸದಾ ನೆನೆಯಬೇಕು, ಎನ್ನಬೇಕು, 'ಮಿತ್ರಾಯನಮಃ'.

**–ಡಾ। 'ಜೀವಿ' ಕುಲಕರ್ಣಿ**

## ಮತ್ತೇಕೆ ಹೊರಟು ನಿಂತಿರುವೆ

ಕೊಟ್ಟು ಕಳೆದು ಹೋದವನಲ್ಲ
ನಿದ್ದೆಯನು ಕದ್ದು ನೆರಳನು ಗೆದ್ದ
ಚಿತ್ತದೊಳೆನ್ನ ಚಿತ್ರ ಬರೆದು,
ಪಟ್ಟು ಹಿಡಿದು, ಬಿಡದೆ ಕಾಡುವೆಯಲ್ಲಾ
ಮತ್ತೇಕೆ ಹೊರಟು ನಿಂತಿರುವೆ?

ನನ್ನ ನನ್ನುಸಿರಿಗೆ ನೀಲಾಂಜನದೊಸಗೆ
ಉಲ್ಲಾಸ ಕೊನರಿದ ಹುಲ್ಲು,
ನನ್ನಾಲಂಗಿಸಿದ ಹಸಿರಲೆ ತಂಗಾಳಿ
ನನ್ನ ಹೆಸರನೇ ಇಕ್ಕಲಿಸುತ್ತಿದೆಯಲ್ಲಾ
ಮತ್ತೇಕೆ ಹೊರಟು ನಿಂತಿರುವೆ?

ಬೆಳಗು ಬೈಗಿನಲಿ ಸ್ವರ ಶ್ರವಣಿಸಿದರೇನು
ಹೂನಗೆಯಲಿ ನಾ ಹಾಡಬೇಕು
ಅತ್ತಿತ್ತ ತಿರುಗಿ ಬಂದರೇನು?
ದಿನಚರಿಯೊಳು ನಿತ್ಯ ಅರಳುವೆಯಲ್ಲಾ
ಮತ್ತೇಕೆ ಹೊರಟು ನಿಂತಿರುವೆ?

ನನ್ನ ಸಾಂತ್ವಾನದ ಬೆರಳ ಸೋಕಿನಲಿ
ಬಳಸಿದಷ್ಟು ಬಯಕೆ ಮಾಸಲಿಲ್ಲ
ತುಟಿ ಚಿಪ್ಪುಗಳೊಳಗಿನ ಸಂತಸ
ಆಡಿದಷ್ಟು ಮಾತು ಮುಗಿಯಲಿಲ್ಲವಲ್ಲಾ
ಮತ್ತೇಕೆ ಹೊರಟು ನಿಂತಿರುವೆ?

ನಿತ್ಯ ಸಂಚಾರಿ ಸೂರ್ಯ ಅಸ್ತನಾಗುವನೋ?
ಭೂಮಿಯ ಭ್ರಮೆ ದಿಟವಲ್ಲ ನನ್ನಂತೆ
ಮೌನ ಹಕ್ಕಿ ಕಣ್ಣಲಿ ಥರಗುಟ್ಟಿದೆ
ಒಡಲು ಪನ್ನೀರಾಗಿದೆ ಮತ್ತೆ ಬರುವೆಯಾ?
ಇರುಳ ಕಳೆದ ಮೇಲೆ, ನನ್ನ ನೆನೆಯುತಾ.

**– ಅನಿತಾ ಪಿ. ಪೂಜಾರಿ ತಾಕೊಡೆ**

# ಸೂರ್ಯಕಾಂತಿ

ಅವನ ಆಗಮನವನ್ನೇ ನಿರೀಕ್ಷಿಸಿ ಬೇಸರದಿಂದ ಆಕಳಿಸುತ್ತಾ ಗವಾಕ್ಷಿಯಿಂದ ರೋಡಿನ ಕಡೆಗೊಮ್ಮೆ ನೋಡಿದಳು. ಬೆಳಿಗ್ಗೆಯಿಂದಲೂ ಅದೇಕೋ ಮನಸ್ಸು ಸರಿಯಿಲ್ಲದೆ ಚಡಪಡಿಸುತ್ತಿದ್ದಳು. ವಾರಕ್ಕೊಮ್ಮೆಯಾದರೂ ತಪ್ಪದೆ ಬರುತ್ತಿದ್ದ ಸೂರ್ಯ ಇತ್ತೀಚೆಗೆ ಅದೇಕೆ ಬರಲಿಲ್ಲ ಎಂದು ಆಲೋಚಿಸುತ್ತಾಳೆ. ಅವನನ್ನು ನೋಡದೆ, ಮಾತನಾಡದೆ ಕಾಂತಿಗೆ ಉಲ್ಲಾಸವೇ ಇಲ್ಲ. ಪ್ರಾಥಮಿಕ ಶಾಲೆಯಿಂದಲೂ ಒಂದೇ ಕ್ಲಾಸಿನಲ್ಲಿ ಕಲಿಯುತ್ತಿದ್ದು ಕಾಲೇಜ್ ವ್ಯಾಸಂಗ ಮುಗಿಸಿದಾಗ ಅವರೊಳಗಿನ ಪರಿಚಯ, ಸ್ನೇಹ ಬೆಳೆದು ಹೆಮ್ಮರವಾಗಿ ಪಾತಾಳದವರೆಗೂ ಬಲವಾಗಿ ಬೇರು ಬಿಟ್ಟಿದೆ. ಕಾಂತಿಯ ಮದುವೆಯ ದಿನ ಸೂರ್ಯ ಕೊಟ್ಟ ಆ ಉಂಗುರದ ಉಡುಗೊರೆ, ಅದರ ಮೇಲೆ ಬರೆದಿರುವ 'ಸೂರ್ಯಕಾಂತಿ' ಎಂಬ ಮುದ್ದಾದ ಅಕ್ಷರವನ್ನೊಮ್ಮೆ ನೋಡಿ ಸಂತೋಷದಿಂದ ನಕ್ಕು ಮುತ್ತೊಂದನ್ನು ಕೊಟ್ಟಳು. ಸೂರ್ಯನ ನಡೆ, ನುಡಿ, ವಿಶಾಲ ಮನೋಭಾವಕ್ಕೆ ಕಾಂತಿ ಮಾರು ಹೋಗಿದ್ದಳು. ಬೈಕಿನಲ್ಲಿ ಬರುತ್ತಿದ್ದ ಸೂರ್ಯನನ್ನು ಕಾಂತಿ ನೋಡಿದಾಕ್ಷಣ ಸಂತಸದಿಂದ ಮಹಡಿ ಮೆಟ್ಟಿಲುಗಳನ್ನು ಒಂದೇ ನೆಗೆತಕ್ಕೆ ಹಾರುತ್ತಾ ಓಡೋಡಿ ಬಂದು ಗೇಟ್ ತೆರೆದು ನಿಂತಳು. ಸೂರ್ಯ ಬೈಕ್ ನಿಲ್ಲಿಸಿ ಒಳಗೆ ಬರುತ್ತಿದ್ದಂತೆ ಕಾಂತಿಯ ಪ್ರಶ್ನೆಗಳು ಸಿದ್ಧವಾಗಿಯೇ ಇತ್ತು.

''ಇಷ್ಟು ದಿನಗಳಿಂದ ಎಲ್ಲಿಗೆ ಹೋಗಿದ್ದಿಯಣ್ಣ? ನಿನ್ನ ದಾರಿ ನೋಡಿ ನೋಡಿ ಸೋತು ಹೋದೆ. ಯಾಕಣ್ಣ.... ನಿನ್ನ ಈ ತಂಗಿಯನ್ನು ಮರೆತು ಬಿಟ್ಟೆಯಾ...?'' ಕಾಂತಿಯ ಈ ಮಾತನ್ನು ಕೇಳಿದಾಕ್ಷಣ ಸೂರ್ಯನಿಗೆ ಕಾಂತಿ ತನ್ನ ಮೇಲಿಟ್ಟಿರುವ ಪ್ರೀತಿ ಅದೆಷ್ಟು ಅಮೂಲ್ಯವಾದದ್ದು ಎಂಬುದರ ಅರಿವಾಗುತ್ತದೆ.

''ಕಾಂತಿ.... ನೀನೇ ನನ್ನ ಸರ್ವಸ್ವ... ನನ್ನ ತಾಯಿಗೆ ಹುಷಾರಿಲ್ಲದ ಕಾರಣ ಬರಲಿಕ್ಕಾಗಲಿಲ್ಲ. ಇನ್ನು ಮುಂದೆ ತಪ್ಪದೆ ದಿನಕ್ಕೊಮ್ಮೆ ಬಂದೇ ಬರುತ್ತೇನೆ ಕಾಂತಿ''. ಅನ್ನುತ್ತಾನೆ. ಹೃದಯಗಳೆರಡೂ ಒಂದನ್ನೊಂದು ಅರ್ಥ ಮಾಡಿಕೊಂಡಿವೆ. ಆದ್ದರಿಂದಲೇ ಸೂರ್ಯನ ಬಾಯಿಂದ ಈ ಮಾತು ಹೊರಟಿತು. ಸೂರ್ಯನ ಮಾತು ಕೇಳಿದ ಕಾಂತಿಗೆ ಬೇಸರ ಆಯಿತು.

''ಅಣ್ಣಾ... ನಿನ್ನ ತಾಯಿಗೇನು ಕಾಯಿಲೆ? ಈಗ ಹೇಗಿದ್ದಾರೆ ಅಣ್ಣಾ...?'' ಎಂದು ಉಸಿರು ಬಿಗಿ ಹಿಡಿದುಕೊಂಡು ಅವಸರದಿಂದ ಸೂರ್ಯನನ್ನು ಪ್ರಶ್ನಿಸಿದಳು. ಕಿಸೆಯಿಂದ ಕರವಸ್ತ್ರ ತೆಗೆದು ಮುಖ ಒರಸುತ್ತಾ ಸೂರ್ಯ...,

''ಮಲಗಿದ್ದಲ್ಲೇ ಇದ್ದಾರೆ ಕಾಂತಿ. ನನ್ನಿಂದಾದಷ್ಟು ಪ್ರಯತ್ನ ಮಾಡುತ್ತಾ ಇದ್ದೇನೆ. ನನ್ನನ್ನು ಪ್ರೀತಿಯಿಂದ ಸಾಕಿದ ಆ ತಾಯಿಯನ್ನು ನಾನೆಂದೂ ಮತ್ತೊಮ್ಮೆ ಪಡೆಯಲಾರೆ. ಆದರೆ ಏನು ಮಾಡಲಿ ಹೇಳು, ಇದೇ ಸಮಯಕ್ಕೆ ನನ್ನ Business ಲಾಸ್ ಆಗಬೇಕಾ? ಕೈಯ್ಯಲ್ಲಿ ಹಣ ಇಲ್ಲದಿದ್ದರೂ ನನ್ನ ತಾಯಿಯನ್ನು ಬದುಕಿಸಲು ಪ್ರಯತ್ನ ಮಾಡುತ್ತಿದ್ದೇನೆ ಕಾಂತಿ'', ನಿಟ್ಟುಸಿರೊಂದನ್ನು ಬಿಟ್ಟು, ಕೈಗಡಿಯಾರದ ಚೈನನ್ನು ಸರಿ ಮಾಡುತ್ತಾ ಹೇಳುತ್ತಾನೆ. ಕಾಂತಿಯ ಮನಸ್ಸು ಸೂರ್ಯನ ಕಷ್ಟವನ್ನೇ ನೆನೆಯುತ್ತದೆ. ಅವಳಿಗರಿವಿಲ್ಲದಂತೆ ಕಣ್ಣೀರು ತೊಟ್ಟಿಕ್ಕಲು ಪ್ರಾರಂಭವಾಯಿತು.

''ಅಣ್ಣಾ... ನಿನ್ನ ತಾಯಿ ಬೇರೆ ಅಲ್ಲ, ನನ್ನ ತಾಯಿ ಬೇರೆಯಲ್ಲ, ಹಣದ ವಿಚಾರಕ್ಕೆ ಚಿಂತಿಸಬೇಡ'' ಎಂದು ಹೇಳುತ್ತಾ ನೇರ ಒಳಗೆ ಹೋದಳು. ಸೂರ್ಯ ಅರ್ಥವಿಹೀನನಾಗಿ ಕಾಂತಿ ಹೋದ ದಿಕ್ಕನ್ನೇ ನೋಡುತ್ತಾನೆ. ಅವಳ ಆ ಮುದ್ದಾದ ನಡಿಗೆಯಲ್ಲಿ ಮುಗ್ಧತೆಯನ್ನು ಕಂಡ, ಮಾತಿನಲ್ಲಿ ವೇದದ ನೀತಿಯನ್ನು ಕಂಡ, ನೋಟದಲ್ಲಿ ಸೋದರಿತ್ವವನ್ನು ಕಂಡ. ಅವಳ ಸುಂದರ ರೂಪಿನಲ್ಲಿ ತಾಯ್ತನವನ್ನು ಕಂಡು ಮನದಲ್ಲೇ ಹಿಗ್ಗುತ್ತಿರುವಾಗ ಕಾಂತಿ ಕೈಯಲ್ಲೊಂದು ಚಿಕ್ಕ ಪೆಟ್ಟಿಗೆಯನ್ನು ಹಿಡಿದುಕೊಂಡು ಬಂದು ಸೂರ್ಯನೆದುರು ನಿಂತು.....

''ತಗೋ ಅಣ್ಣ... ನಿನ್ನ ತಾಯಿಗೆ ಚೆನ್ನಾಗಿ ಮದ್ದು ಮಾಡು. ದೇವರು ಖಂಡಿತ ವಾಸಿ ಮಾಡೇ ಮಾಡುತ್ತಾನೆ'' ಅಂದಾಗ ಸೂರ್ಯ ಆ ಕೆಂಪು ಪೆಟ್ಟಿಗೆಯನ್ನು ಪ್ರಶ್ನಾರ್ಥಕವಾಗಿ ನೋಡುತ್ತಾ, ಅದನ್ನು ತೆರೆದು ನೋಡಿದಾಗ ತನ್ನ ಕಣ್ಣುಗಳನ್ನು ತಾನೇ ನಂಬದೆ ಶಿಲೆಯಂತೆ ನಿಂತು.....



''ಕಾಂತಿ ನೀನು ಯಾರೋ ನಾನು ಯಾರೋ... ಆದರೂ ಬಾಲ್ಯದಿಂದಲೂ ಒಟ್ಟಿಗೆ ಕಲಿತ ಆ ಪರಿಚಯದ ನೆನಪಿನಿಂದ ನಿನ್ನ ಒಡವೆಗಳನ್ನು ನನ್ನ ಕೈಗಿಂದು ಕೊಡುತ್ತಿದ್ದಿಯಾ? ನಿನ್ನ ಗಂಡನೇನಾದರೂ ಕೇಳಿದರೆ ನೀನೇನು ಉತ್ತರ ಕೊಡುತ್ತಿ? ಬೇಡ ಕಾಂತಿ ನನಗೋಸ್ಕರ ನಿನ್ನ ಬಾಳನ್ನು ಹಾಳು ಮಾಡಿಕೊಳ್ಳಬೇಡ'' ಅಂದಾಗ ಕಾಂತಿ ಒಪ್ಪಲಿಲ್ಲ. ಒಡವೆ, ಸಂಪತ್ತು ಯಾವುದೂ ಅವಳಿಗೆ ಬೇಡ. ಅವಳಿಗೆ ಬೇಕಾದುದು ಸಹೋದರ ಪ್ರೀತಿ ಮಾತ್ರ. ಸೂರ್ಯ ಏನು ಹೇಳಿದರೂ ಕಾಂತಿ ಕೇಳುವುದಿಲ್ಲ.

✍ ಶಿಮಂತೂರು ಚಂದ್ರಹಾಸ ಸುವರ್ಣ

''ಈ ಒಡವೆ ನನ್ನ ಗಂಡ ಮಾಡಿಸಿದ್ದಲ್ಲ, ನನ್ನ ತಂದೆ ಮಾಡಿಸಿದ್ದು. ರಕ್ತ ಸಂಬಂಧದಿಂದ ನಾವು ಅಣ್ಣ ತಂಗಿಯರಲ್ಲದಿದ್ದರೂ ಮಾನಸಿಕ ಸಂಬಂಧದಿಂದ ನಾವೆಂದೆಂದೂ ಅಣ್ಣತಂಗಿಯರೆ. ಯಾಕೆ ಹಾಗೆ ನನ್ನನ್ನೇ ನೋಡುತ್ತಿ...? ನನ್ನ ಮೇಲೆ ತಂಗಿಯೆಂಬ ಭಾವನೆ ಇದ್ದರೆ ತೆಗೆದುಕೊಳ್ಳಲೇಬೇಕು'' ಎಂದಳು. ಕಾಂತಿಯ ವಿಶ್ವಾಸ ಹಟದೆದುರು ಸೂರ್ಯ ಸೋಲಲೇ ಬೇಕಾಯಿತು. ಹೃದಯ ಹರ್ಷದಿಂದ ಉಕ್ಕೇರಿದಾಗ ಕಾಂತಿ ಸೂರ್ಯನ ಬಾಹುಬಂಧನದಲ್ಲಿ ಬಂಧಿಯಾಗಿದ್ದಳು. ಸಹೋದರತೆಯ ಗುರುತಾಗಿ ಕಾಂತಿಯ ಹಣೆಗೊಂದು ಸಿಹಿಮುತ್ತನ್ನಿತ್ತು ಸೂರ್ಯ ಕಾಫಿ ಕುಡಿದು ಹೊರಡಲನುವಾಗುವನು. ಕಾಂತಿ ಕೊಟ್ಟ ಒಡವೆಯ ಪೆಟ್ಟಿಗೆಯನ್ನು ಕೈಯಲ್ಲಿಡಿದುಕೊಂಡು ಅವಳಿಗೆ 'ಟಾಟಾ' ಮಾಡಿ ಬೈಕ್ ಸ್ಟಾರ್ಟ್ ಮಾಡಿದ. ಬೈಕ್ ಶಬ್ದ ಮಾಡುತ್ತಾ ಕಣ್ಮರೆಯಾಗುವ ವರೆಗೂ ನೋಡಿ ಬಾಗಿಲು ಹಾಕಿ ಕಾಫಿಯ ಖಾಲಿ ತಟ್ಟೆಗಳನ್ನು ಹಿಡಿದುಕೊಂಡು ಕಾಂತಿ ಒಳಗೆ ಹೋಗುತ್ತಾಳೆ. ಕಾಂತಿಗೊಬ್ಬ ಅಣ್ಣನಿದ್ದ. ಅವನು ಕುಡುಕ ಮಾತ್ರ ಅಲ್ಲ ಸಿಕ್ಕಸಿಕ್ಕ ಹೆಂಗಸರ ಹಿಂದೆಯೇ ಅಲೆದು ಬಾಳಿನ ಅಮೂಲ್ಯ ಸಮಯವನ್ನು ವ್ಯರ್ಥವಾಗಿ ಕಳೆಯುತ್ತಾ ಹೆತ್ತವರಿಗೆ ಹೊರೆಯಾಗಿದ್ದಾನೆ. ಕಾಂತಿಯ ತಂದೆ ಮಗನನ್ನು ಸನ್ಮಾರ್ಗಕ್ಕೊಯ್ಯಲು ಪ್ರಯತ್ನಿಸಿ ವಿಫಲರಾಗಿ ಅವನನ್ನು ಅವನಷ್ಟಕ್ಕೆ ಬಿಟ್ಟು ಬಿಟ್ಟಿದ್ದಾರೆ. ಕಾಂತಿಯ ಪಾಲಿಗೆ ಸೂರ್ಯನೇ ಒಡಹುಟ್ಟಿದ ಅಣ್ಣ. ಬಾಲ್ಯದಿಂದಲೇ ಅವನೊಟ್ಟಿಗೇ ಇದ್ದ ಕಾಂತಿಗೆ ಸೂರ್ಯನ ಸರಳ ಸ್ವಭಾವದ ಅರಿವಿತ್ತು. ಸಮಾಜದ ಜನರು ತಪ್ಪಾಭಿಪ್ರಾಯದಿಂದ ಅಪಪ್ರಚಾರದ ಗಾಳಿಯೆಬ್ಬಿಸಿದರೂ ಇವರ ಪ್ರೀತಿಯೆಂಬ ವೃಕ್ಷ ಉರುಳದೆ ತಲೆಯೆತ್ತಿ ನಿಂತು ಕೊಂಬೆ ರೆಂಬೆಗಳನ್ನು ವಿಶಾಲವಾಗಿ ಚಾಚಿ ಸೊಂಪಾಗಿ ಬೆಳೆಯುತ್ತಲೇ ಇದೆ. ಅವಳ ಮುಗ್ಧ ಮನಸ್ಸಿನಲ್ಲಿ ಅನ್ಯಾಯ ಕಪಟಕ್ಕೆ ಎಡೆಯಿರಲಿಲ್ಲ. ಕಾಂತಿಯ ನೈಜ ಪ್ರೀತಿ ಸೂರ್ಯನನ್ನು ಸೆರೆಹಿಡಿಯಿತು. ಕಾಂತಿಯ ಗಂಡ ಮುಂಗೋಪಿ ಮಾತ್ರವಲ್ಲ ಹಿತ್ತಾಳಿ ಕಿವಿಯವನೆಂದು ಕಾಂತಿಯ ಮುಖೇನ ತಿಳಿದುಕೊಂಡ ಮೇಲೆ ಸೂರ್ಯ ಅವನ ಗೆಳೆತನವನ್ನು ಇಚ್ಛಿಸಲಿಲ್ಲ. ಅದಕ್ಕಾಗಿ ಕಾಂತಿಯ ಯಜಮಾನ ಕೆಲಸಕ್ಕೆ ಹೋಗಿರುವ ಸಮಯದಲ್ಲಿ ಕಾಂತಿಯ ಮನೆಗೆ ಬರುತ್ತಿದ್ದ. ಹಸೆಮಣೆಯಲ್ಲಿ ಕಾಂತಿಯ ಜತೆ ಆಸೀನನಾಗಿದ್ದಾಗ ಮಾತ್ರ ಅವಳ ಯಜಮಾನನ್ನು ಸೂರ್ಯ ಕಂಡಿದ್ದ.

ಕಾಂತಿಯಿಂದ ಬೀಳ್ಕೊಂಡ ಸೂರ್ಯ ಬೈಕನ್ನು ನೇರ ಮನೆಯಕಡೆಗೆ ಓಡಿಸಿದ. ಹೆತ್ತ ತಾಯಿ ಮರಣ ಶಯ್ಯೆಯಲ್ಲಿ ಒದ್ದಾಡಿಕೊಂಡಿರುವುದನ್ನು ಕಂಡಾಗ ಕಣ್ಣೀರು ಹನಿಹನಿಯಾಗಿ ಭೂದೇವಿಯ ಪಾದ ಸ್ಪರ್ಶ ಮಾಡಿತು. ತಲೆಯಲ್ಲಿ ಹಲವಾರು ಯೋಚನೆಗಳು, ಕೈಯಲ್ಲಿ ಹಣ ಇಲ್ಲ. ಬೇಗಬೇಗನೆ ತಾಯಿಗೆ ಮದ್ದು ಕುಡಿಸಿ ಬ್ಯಾಂಕಿನ ಕಡೆಗೆ ಬೈಕ್ ಓಡಿಸಿದ. ಕಾಂತಿಯ ಬಂಗಾರವನ್ನು ಒತ್ತೆ ಇಟ್ಟು ಬ್ಯಾಂಕಿನಿಂದ ಹಣ ಪಡೆಯಲಿಕ್ಕಾಗಿ ಸೂರ್ಯ ಮೇನೇಜರರ ಚೇಂಬರ್ ಪ್ರವೇಶಿಸಿ ಅಲ್ಲಿ ಕುಳಿತಿರುವ ಹೊಸ ವ್ಯಕ್ತಿಯನ್ನು ನೋಡಿ.....

''ಸಾರ್ ಮೇನೇಜರ್ ಶರ್ಮರು ಇಲ್ಲವೇ....?'' ಎಂದು ಕೇಳಿದ. ಮೇನೇಜರ್ ಶರ್ಮರಿಗೆ ವರ್ಗವಾಗಿ ಅವರ ಬದಲಿಗೆ ಈಗ ಹೊಸ ಮೇನೇಜರ್ ಶೇಖರ ನೇಮಕಗೊಂಡಿರುವ ವಿಚಾರ ಸೂರ್ಯನಿಗೆ ತಿಳಿದಿರಲಿಲ್ಲ.

''ಅವರಿಗೆ ವರ್ಗ ಆಗಿದೆ, ಅಂದ ಹಾಗೆ ನಿಮಗೆ ಏನು ಆಗಬೇಕು?'' ಎಂದು ಹೊಸ ಮೇನೇಜರರು ಕೇಳಿದಾಗ ಸೂರ್ಯ ಹಣದ ಅಗತ್ಯವನ್ನು ವಿವರಿಸಿ ಕಾಂತಿ ಕೊಟ್ಟಿರುವ ಒಡವೆಗಳ ಪೆಟ್ಟಿಗೆಯನ್ನು ಅವನ ಕೈಗೆ ಕೊಟ್ಟು ಹತ್ತು ಸಾವಿರ ರೂಪಾಯಿ

ಒತ್ತೆ ಹಣ ಬೇಕೆಂದು ಕೇಳುತ್ತಾನೆ. ಶೇಖರ ಒಂದೊಂದೇ ಒಡವೆಗಳನ್ನು ತೆಗೆದು ನೋಡಿದಾಗ ಅವನ ಸಂಶಯ ಮತ್ತಷ್ಟು ಬಲವಾಯಿತು. ತದೇಕ ದೃಷ್ಠಿಯಿಂದ ಸೂರ್ಯನನ್ನೊಮ್ಮೆ ನೋಡಿ ''ನಿಜ, ಜನರಾಡಿಕೊಳ್ಳುವುದಂತೂ ನಿಜ'' ಎಂದು ಮನದೊಳಗೇ ತೀರ್ಮಾನಿಸಿ ಹೊರಗೆ ತೋರಿಸದೆ,

''ಹಣವೇನೋ ಕೊಡಬಹುದು. ಆದರೆ ಆಕೌಂಟ್ ಬುಕ್‌ನಲ್ಲಿ ಮಾತ್ರ ನಾಳೆಯ ಡೇಟ್ ಬರೆಯಬೇಕಾಗುತ್ತದೆ, ಕಾರಣ ಈಗ ಗಂಟೆ ಎರಡುವರೆಯಾಗುತ್ತಾ ಬಂತು. ಮಧ್ಯಾಹ್ನದ ಮೇಲೆ ಕ್ಯಾಶ್ ಕೊಡುವುದೂ ಹಾಗೂ ಕ್ಯಾಶ್ ಪಡಕೊಳ್ಳುವ ಪದ್ಧತಿಯಿಲ್ಲ. ಮಧ್ಯಾಹ್ನದ ನಂತರ ನಮಗೆ ಕ್ಲರಿಕಲ್ ವರ್ಕೇ ತುಂಬಾ ಇದೆ'' ಎಂದ ಶೇಖರ. ಸೂರ್ಯ ಈಗ ಯಾವುದಕ್ಕೂ ತಯಾರು. ಈಗ ಅವನಿಗೆ ತಾಯಿ ಬದುಕಬೇಕು. ಅವರು ಬದುಕಬೇಕಿದ್ದರೆ ಹಣ ಮುಖ್ಯವಾಗಿ ಬೇಕು. ಸೂರ್ಯ ಮೆನೇಜರರು ಹೇಳಿದಂತೆ ಕೇಳಿ ಹತ್ತು ಸಾವಿರ ರೂಪಾಯಿಯನ್ನು ಪಡೆದು ಮನೆಯ ಕಡೆಗೆ ಹೊರಟ. ಶೇಖರನಿಗೆ ಸೂರ್ಯ ಬಂದು ಹೋದ ಮೇಲೆ ಕೆಲಸದ ಮೇಲೆ ಆಸಕ್ತಿಯೇ ಇಲ್ಲ. ಹಲವಾರು ಆಲೋಚನೆಗಳು ಒಂದರ ಹಿಂದೆ ಒಂದರಂತೆ ಹೊಳೆಯುತ್ತಲೇ ಇದೆ. ಸಂಸಾರ ಶರಧಿಯಲ್ಲಿಂದು ಭೋರ್ಗರೆಯುವ ತೆರೆಯೊಂದು ಎದ್ದಿದೆ. ಅದು ಎಲ್ಲಿಗೆ ಅಪ್ಪಳಿಸುತ್ತದೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ.

''ಈ ಬಂಗಾರದ ಒಡವೆಗಳೆಲ್ಲ ಇವನ ಕೈಗೆ ಹೇಗೆ ಬಂತು?'' ಇದನ್ನೇ ಆಲೋಚಿಸುವನು. ಈ ಪ್ರಶ್ನೆಗೆ ಉತ್ತರ ಹೊಳೆಯದೆ ಒದ್ದಾಡುತ್ತಿದ್ದಾನೆ. ಕೆಲಸ ಮುಗಿಸಿ ಮನೆಯ ಕಡೆ ವೇಗವಾಗಿ ಬರುತ್ತಿರುವಾಗ ಗಯ್ಯಾಳಿ ಗಂಗಮ್ಮ...

''ಏನು ಮೆನೇಜರರೆ, ಈ ದಿನ ಬೇಗ ಬಂದು ಬಿಟ್ಟಿರಾ?'' ಅಂದಾಗ ಶೇಖರ....

''ಹೌದು, ಸ್ವಲ್ಪ ಬೇಗ ಬಂದೆ'' ಎನ್ನುತ್ತಾ ನಿಲ್ಲುವನು. ಗಂಗಮ್ಮನಿಗೆ ಮದುವೆಯಾಗಿದ್ದರೂ ಅವಳ ದೃಷ್ಠಿಯಲ್ಲಿ ಕಟ್ಟಿರುವ ಮಂಗಳಸೂತ್ರಕ್ಕೆ ಬೆಲೆಯೇ ಇಲ್ಲ. ಮೈಯಲ್ಲಿ ಯೌವ್ವನದ ಕಾವು ಇರುವಾಗ ಗಂಡನೇ ಯಾಕೆ? ಯಾರಾದರೇನು ಎನ್ನುವ ತೀರ್ಮಾನ ಗಂಗಮ್ಮನದ್ದು. ಸೂರ್ಯ ಕಾಂತಿಯ ಮನೆಗೆ ಬಂದು ಹೋಗುವುದನ್ನು ಗಂಗಮ್ಮ ಅದೆಷ್ಟೋ ಬಾರಿ ಕಂಡಿದ್ದಾಳೆ. ಬೇರೆ ಗಂಡಸರ ಮೇಲೆ ಕಾಮದ ದೃಷ್ಠಿ ಬೀರುತ್ತಿರುವ ಗಂಗಮ್ಮನಿಗೆ ಕಾಂತಿಯ ಆದರ ಪೂರ್ಣವಾದ ಸಹೋದರತೆಯ ಪ್ರೀತಿಯಲ್ಲಿ ಹಾದರ ತುಂಬಿರುವಂತೆ ಕಂಡು ಬಂದರೆ ಆಶ್ಚರ್ಯವಿಲ್ಲ. ಈ ಸಂಗತಿಯನ್ನು ಕಾಂತಿಯ ಪತಿ ಶೇಖರನಲ್ಲಿ ಹೇಳದೆ ಅವಳಿಗೆ ಉಸಿರು ಕಟ್ಟಿದೆ. ಅದಕ್ಕೋಸ್ಕರವೇ ಇಂದು ಅವನಿಗೆದುರಾಗಿ ಬಂದು ಮಾತನಾಡಲು ಪ್ರಾರಂಭಿಸುತ್ತಾಳೆ.

''ನೆಂಟರು ಬಂದಿದ್ದಾರೆಂದು ಬೇಗನೆ ಬಂದಿರಾ? ಅವರು ಹತ್ತು ಗಂಟೆಗೆ ಬಂದವರು ಹನ್ನೊಂದಕ್ಕೇ ಹೊರಟು ಹೋದರು'' ಎಂದು ಬಳಸುದಾರಿಯಲ್ಲಿ ಸಾಗಲು ಪ್ರಯತ್ನಿಸುತ್ತಿದ್ದಳು. ಶೇಖರ ಗಂಗಮ್ಮನ ಮಾತುಕೇಳಿ ಮತ್ತಷ್ಟು ಆಲೋಚಿಸುವನು. ಮೊದಲೇ ಕದಡಿದ್ದ ಅವನ ಮನಸ್ಸನ್ನು ಈಗ ಗಂಗಮ್ಮ ಮತ್ತೂ ಕೆದಕಿದಳು.

''ನೆಂಟರೇ... ಅದೊಂದೂ ನನಗೆ ಗೊತ್ತಿಲ್ಲವಲ್ಲ'' ಎಂದು ಶೇಖರ ಆಶ್ಚರ್ಯದಿಂದ ಹೇಳಿದ.

''ಗೊತ್ತಿಲ್ಲವೇ...? ಯಾವಾಗಲೂ ಬರುತ್ತಾರೆ. ಉದ್ದನೆ ಮೀಸೆಯ ಹಿಪ್ಪಿಕಟ್ಟಿನ ತರುಣ, ನಿಮ್ಮ ಗೆಳೆಯನಾಗಿರಬಹುದೆಂದು ನಾನೆಣಿಸಿದ್ದೆ ಸಾರ್. ಬೈಕ್‌ನಲ್ಲೇ ಅವರ ಸವಾರಿ''. ಗಂಗಮ್ಮನ ಮಾತು ಶೇಖರನ ಮೆದುಳಿಗೆ ಶೂಲದಂತೆ ಇರಿಯಿತು. ಅವಳ ಮಾತು ಅವನ ಮನದಲ್ಲಿ ಮತ್ತೂ ಮತ್ತೂ ಮಾರ್ದನಿ ಕೊಡುತ್ತದೆ.

''ಹೌದು ಅವನೆ, ನಾನು ಬ್ಯಾಂಕಿನಲ್ಲಿ ನೋಡಿದ ವ್ಯಕ್ತಿ. ಕಾಂತಿ ನನ್ನನ್ನು ವಂಚಿಸಿ ಅವನ ಜತೆ ಚಕ್ಕಂದವಾಡುತ್ತಿದ್ದಾಳೆ'' ಎಂದು ಮನಸ್ಸಿನಲ್ಲೇ ನೆನೆಯುವನು. ಶೇಖರ ಸಂಶಯದ ಸಂಕೋಲೆಯಲ್ಲಿ ಬಂಧಿಯಾಗಿದ್ದಾನೆ. ಗಂಗಮ್ಮನತ್ತ ತಿರುಗಿ ನೋಡದೆಯೇ ಮನೆಯತ್ತ ಹೊರಟ. ದಾರಿಯುದ್ದಕ್ಕೂ ಗಂಗಮ್ಮನ ಮಾತೇ ನೆನಪಾಗುತ್ತದೆ. ಅವನ ಕಣ್ಣ ಮುಂದೆ ಸೂರ್ಯನ ಬಿಂಬ ಕ್ಷಣಕಾಲ ಕಂಡಂತೆ ಭಾಸವಾಗುತ್ತದೆ.

''ನನ್ನ ಹೆಂಡತಿ ವ್ಯಭಿಚಾರಿಣಿಯೇ?'' ಎಂದು ತನ್ನೊಳಗೇ ಪ್ರಶ್ನೆ ಹಾಕಿಕೊಂಡಾಗ ಗಂಗಮ್ಮನ ಮಾತು, ಸೂರ್ಯನ ರೂಪ, ಕಾಂತಿಯ ಆಭರಣ, ಇವು ಮೂಕ ಸಾಕ್ಷಿಗಳಾಗಿ ಅವನ ಪ್ರಶ್ನೆಗೆ ಉತ್ತರ ಸಾರುತ್ತಿವೆ. ಆಲೋಚನಾಮಗ್ನನಾಗಿ ನಿಧಾನವಾಗಿ ಮುಚ್ಚಿದ್ದ ಬಾಗಿಲನ್ನು ದೂಡಿದಾಗ ಕಾಂತಿಯ ನಗುಮುಖದ ಸ್ವಾಗತವಿಲ್ಲದೆ ಕ್ಷಣ ಹೊತ್ತು ವಿಚಲಿತನಾದ. ಚಾವಡಿಯಲ್ಲಿ ಕುಳಿತುಕೊಂಡು ಶೂ ಬಿಚ್ಚುತ್ತಾನೆ. ಆಗಲೂ ಕಾಂತಿಯ ಆಗಮನವಿಲ್ಲ. ನೇರ ಬೆಡ್‌ರೂಮಿಗೆ ಹೋಗಿ ನೋಡಿದಾಗ ಕಾಂತಿ ಬೋರಲಾಗಿ ಮಲಗಿರುವುದನ್ನು ಕಂಡು ಶೇಖರನ ಸಂಶಯ ಮತ್ತಷ್ಟು ಬಲವಾಯಿತು. ಶೇಖರ ತಟ್ಟಿ ಎಬ್ಬಿಸಿದಾಗ ಕಾಂತಿ ಗಾಬರಿಯಿಂದ ಎಚ್ಚತ್ತು 'ಹಾಳು ನಿದ್ರೆ' ಎಂದು ನಿದ್ರೆಗೆ ಶಪಿಸುತ್ತಾ...

''ಇಂದು ಬೇಗ ಬಂದು ಬಿಟ್ಟಿರಾ?'' ಎಂದು ಪ್ರಶ್ನಿಸುತ್ತಾಳೆ.

''ಹೌದು ಬರಬೇಕಾಯಿತು. ಬಂದೆ'' ಎಂದುತ್ತರಿಸಿದ ಶೇಖರ. ಸರಳ ಸ್ವಭಾವದ ಕಾಂತಿಗೆ ಪತಿಯ ಕುಯುಕ್ತಿಯ ಮಾತು ಅರ್ಥವಾಗದೆ, ಅದನ್ನು ಬೇರೊಂದು ರೀತಿಯಲ್ಲಿ ಅರ್ಥಮಾಡಿಕೊಂಡು ಲಘುಬಗೆಯಿಂದ ಅಡುಗೆ ಮನೆಯತ್ತ ನಡೆದು ಗ್ಯಾಸ್ ಉರಿಸಿ ಕಾಫಿ ತಯಾರು ಮಾಡುತ್ತಾಳೆ. ಶೇಖರ ಡ್ರೆಸ್ ಬದಲಿಸಿ ಲುಂಗಿ ಉಟ್ಟುಕೊಂಡು ಆರಾಮ ಕುರ್ಚಿಯಲ್ಲಿ ಕುಳಿತುಕೊಂಡು ಪೇಪರ್ ಬಿಡಿಸುತ್ತಾನೆ. 'ಗಂಡನಿಂದ ಹೆಂಡತಿಯ ಕೊಲೆ' ಎಂಬ ಶಿರೋನಾಮೆಯತ್ತ ಶೇಖರನ ದೃಷ್ಠಿ ಹರಿದಾಗ ಅದನ್ನು ಮತ್ತೂ ಮತ್ತೂ ಓದಿದ. ಕಾಂತಿ ಸುವಾಸನಾ ಯುಕ್ತವಾದ ಬ್ರೂ ಕಾಫಿ ತಯಾರಿಸಿ ಶೇಖರನ ಮುಂದೆ ಇಟ್ಟಳು. ಕಾಫಿ ಹೊಗೆ ಕಾರುತ್ತಿದ್ದಂತೆ ಶೇಖರನ ಮನದಲ್ಲಿ ವಿಷ ಬೀಜದ ಬಿಸಿ ಹೊಗೆ ಕಾರುತ್ತಲೇ ಇದೆ. ಕಾಂತಿ ತನ್ನ ಕೈಯಾರೆ ತಯಾರಿಸಿದ ಕಾಫಿಗಾಗಿ ಕಾಯುತ್ತಿದ್ದ ಶೇಖರ ಇಂದು ನಿರಾಕರಿಸಿದ. ಕಾಂತಿ ಪತಿಯ ನಡತೆಯಿಂದ ಹೆದರಿ ಜ್ವರವೇನಾದರೂ ಬರುತ್ತದೆಯೇ ಎಂದು ಹಣೆ, ಎದೆಯ ಮೇಲೆ ಕೈ ಹಾಕಿ ಪರೀಕ್ಷಿಸಿದರೂ, ಲಕ್ಷಿಸದೆ ಶೇಖರ ಪೇಪರಿನ ಮೂಲೆ ಮೂಲೆಯತ್ತ ದೃಷ್ಠಿ ಹರಿಸುತ್ತಾನೆ. ಅವನ ಮೆದುಳನ್ನು ವಿಷದ ಹುಳುವೊಂದು ಕೊರೆಯುತ್ತಲೇ ಇದೆ. ಅದು ಸಜೀವವಾಗಿರಲು ಗಂಗಮ್ಮ ಪುಷ್ಠಿದಾಯಕ ಆಹಾರ ಸುರಿದಿದ್ದಾಳೆ. ಇದೇನೂ ಅರಿಯದ ಮುಗ್ಧೆ ಪತಿಯು ಆಫೀಸು ಕೆಲಸದಲ್ಲಿ ತಲೆ ಬಿಸಿಯಲ್ಲಿರಬೇಕೆಂದೆಣಿಸಿ ಕಾಫಿಯನ್ನು ಹಿಂದೆ ತೆಗೆದುಕೊಂಡು ಹೋಗುತ್ತಾಳೆ.

ರೂಪವತಿಯಾದ ಹೆಂಡತಿ, ಕೈತುಂಬಾ ಸಂಬಳ, ಬಂಗಲೆಯಂತಹ ಮನೆ ಇದ್ದರೂ ಶೇಖರನ ಮನದಲ್ಲಿಂದು ಶಾಂತಿ ಇಲ್ಲ. ಕಾಂತಿ ಅದೆಷ್ಟು ಒತ್ತಾಯ ಮಾಡಿದರೂ ರಾತ್ರಿ ಊಟವನ್ನೂ ಮಾಡದೆ ಬರಿ ಹೊಟ್ಟೆಯಲ್ಲಿ ಮಲಗಿದಾಗ ಅವಳು ಕಳವಳದಿಂದ ಬೆಂದು ತಾನೂ ಊಟ ಮಾಡದೆ ಬೇಯಿಸಿದ ಅನ್ನ ಪಲ್ಯಗಳನ್ನು ಹಾಗೆಯೇ ಬಿಟ್ಟು ಬೆಡ್‌ರೂಮ್ ಪ್ರವೇಶಿಸಿ ಪತಿಯ ದೇಹಕ್ಕಂಟಿ ಮಲಗಿದರೂ ಶೇಖರನ ಚಿತ್ತ ಬದಲಾಗಲಿಲ್ಲ. ಪತಿಯ ಕೋಪದ ಕಾರಣ ತಿಳಿಯದೆ ಕಾಂತಿ ರಾತ್ರಿಯನ್ನು ಯುಗದಂತೆ ಕಳೆದಳು. ಇಬ್ಬರಿಗೂ ರಾತ್ರಿ ನಿದ್ರೆಯಿಲ್ಲ. ಕಾಂತಿ ಬೇಗನೆ ಎದ್ದು ಅವಸರವಸರವಾಗಿ ನಿತ್ಯ ಕರ್ಮಗಳನ್ನು ತೀರಿಸಿ ಚಾ ತಯಾರು ಮಾಡಿ ಪತಿಯನ್ನು ಕರೆದಾಗ 'ನನಗೇನೂ ಬೇಡ' ಎಂಬ ಉತ್ತರ ಕೇಳಿ ತತ್ತರಿಸಿ ಹೋದಳು. ಪತಿಗೆ ಎಂದೂ ಎದುರುತ್ತರ ಕೊಡದ ಕಾಂತಿ....

''ಅದೇಕೆ ಬೇಡ...? ನಿನ್ನೆಯಿಂದ ನನ್ನ ಕೈ ಅಡಿಗೆಯನ್ನೇ ಮುಟ್ಟಿಲ್ಲ. ನೀವೂ ತಿನ್ನದೆ ನನ್ನನ್ನು ಉಪವಾಸ ಸಾಯಿಸುತ್ತೀರಾ?'' ಎಂದಳು.

''ನಿನಗೆ ಬೇಕಿದ್ದರೆ ತಿನ್ನು, ಕುಡಿ. ಆದರೆ ನನ್ನನ್ನು ಮಾತ್ರ ಕರೆಯಬೇಡ'' ಎಂದು ಶೇಖರ ಕೋಪದಿಂದ ಉತ್ತರಿಸಿದಾಗ, ಪತಿಯ ಕೋಪದ ಅನುಭವ ಇದ್ದ ಕಾಂತಿ ಮೌನವಾಗಿ ಅಡಿಗೆ ಮನೆಯತ್ತ ಹೋದಳು. ಕಣ್ಣಂಚಿನಲ್ಲಿ ಕಣ್ಣೀರು ಅವಳಿಗರಿವಿಲ್ಲದಂತೆಯೇ ತೊಟ್ಟಿಕ್ಕುತ್ತದೆ. ನನ್ನಿಂದ ಪತಿಗಾದ ಅನ್ಯಾಯವಾದರೂ ಏನು? ಎಂದು ಆಲೋಚನಾ ಮಗ್ನಳಾಗಿರುವಾಗ ಗೋಡೆಗಡಿಯಾರ ಎಂಟುವರೆ ಗಂಟೆಯಾಯಿತೆಂದು ಸಾರುತ್ತದೆ.

'ಹೌದು, ನನ್ನ ತಪ್ಪಾದರೂ ಏನೆಂದು ಕೇಳಲೇಬೇಕು' ಎಂದು ದೃಢ ಸಂಕಲ್ಪದಿಂದ ಅಡಿಗೆ ಮನೆಯಿಂದ ಡ್ರಾಯಿಂಗ್ ರೂಮಿಗೆ ಬಂದಳು. ಪತಿ ಆಗಲೇ ಬ್ಯಾಂಕಿಗೆ ಹೋಗುವ ಸಿದ್ಧತೆಯಲ್ಲಿದ್ದಾಗ ಕಾಂತಿ ಹತ್ತಿರಕ್ಕೆ ಹೋಗಿ...

''ರೀ... ನೀವು ಈ ರೀತಿ ಉಪವಾಸ ವ್ರತ ಮಾಡಬೇಕಿದ್ದರೆ ನನ್ನಿಂದಾದ ತಪ್ಪಾದರೂ ಏನು? ಅದನ್ನು ಹೇಳದೆ ನಾನು ಖಂಡಿತ ಬಿಡೋದಿಲ್ಲ'' ಎಂದು ಗಂಭೀರವಾಗಿ ಹೇಳಿದಾಗ, ಡ್ರೆಸ್ ಮಾಡಿಕೊಳ್ಳುತ್ತಿದ್ದ ಶೇಖರ....,

''ಏನಂದಿ...? ಮಾಡಿರುವ ತಪ್ಪನ್ನು ಮುಚ್ಚಿಟ್ಟು ನನ್ನ ಬಾಯಿಂದಲೇ ಹೇಳಿಸಿಕೊಳ್ಳಬೇಕೆಂದಿದ್ದಿಯಾ? ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೂ ಜನಕ್ಕೆ ತಿಳಿದೇ ತಿಳಿಯುತ್ತದೆ'' ಎಂದ. ಪಾಪ, ಕಾಂತಿಗೆ ತನ್ನ ಸರ್ವಸ್ವವಾದ ಪತಿಯೇ ಈ ರೀತಿ ಆಗಲು ಕಾರಣವಾದರೂ ಏನೆಂದು ತಿಳಿಯದೆ, ಆ ಸಮಸ್ಯೆಯ ಪರಿಹಾರಕ್ಕೆ ಕಲ್ಲು ಮನಸ್ಸಿನಿಂದ ಪತಿಗೆ ಎದುರುತ್ತರವಾಗಿ.....

''ನೀವು ಗಂಡಸಲ್ಲವೇ...? ನನ್ನಿಂದ ಏನು ಅಪರಾಧವಾಗಿದೆ ನೇರ ತಿಳಿಸಿ'' ಎಂದಳು. ಶೇಖರನ ಕೋಪ ಜ್ವಾಲಮುಖಿಯಂತೆ ಸಿಡಿಯುತ್ತದೆ.

''ನಿನ್ನ ದೃಷ್ಟಿಯಲ್ಲಿ ನಾನು ಗಂಡಸಲ್ಲ, ಕೇವಲ ಷಂಡ. ನಾನು ಆಫೀಸಿಗೆ ಹೋದ ತಕ್ಷಣ ಬರುತ್ತಾನಲ್ಲ ಬೈಕಿನ ಮಹಾನುಭಾವ..., ನಿನ್ನ old ಪ್ರೇಮಿ, ಅವ ನಿನ್ನಪಾಲಿಗೆ ಗಂಡಸು'' ಎಂದು ಅರಚುವನು. ಕಾಂತಿಗೆ ಈಗ ತಿಳಿಯಿತು, ಪತಿಯ ಕೋಪದ ಕಾರಣ. ಪತಿಯ ಮಾತು ಸಿಡಿಲಿನಂತೆ ಅವಳನ್ನು ಘಾಸಿಗೊಳಿಸಿತು.

''ಅವರು ನನ್ನ ಒಡಹುಟ್ಟಿದವರಲ್ಲದಿದ್ದರೂ ನನಗೆ ಅವರೇ ಅಣ್ಣ. ಅವರನ್ನು Old ಪ್ರೇಮಿ ಅಂತ ಹೇಳಬೇಕಿದ್ದರೆ ನಿಮಗೆ ಅದೆಷ್ಟು ಧೈರ್ಯ? ನಿಮಗೆ ಈ ರೀತಿ ಹೇಳಲಿಕ್ಕೆ ನಾಚಿಕೆ ಆಗೋದಿಲ್ಲವೇ? ಕಾಂತಿ ದುಃಖದಿಂದ ಕಂಗೆಟ್ಟು ಹುಚ್ಚಳಂತಾಗಿ ಹೇಳಿದಳು. ಇದನ್ನು ಕೇಳಿದಾಗ ಶೇಖರನ ಕೋಪ ಮತ್ತೂ ನೆತ್ತಿಗೆ ಏರುತ್ತದೆ.

''ಲೋಕದ ಕಣ್ಣಿಗೆ ಅಣ್ಣಾಂತ ಹೇಳಿಸಿಕೊಂಡು, ಆ ಪವಿತ್ರವಾದ ಪದವನ್ನು ಬೀದಿಪಾಲು ಮಾಡುತ್ತಿರುವ ನಿನ್ನಂತಹ ಅದೆಷ್ಟು ತರುಣಿಯರು ಈ ಸಮಾಜದಲ್ಲಿ ತುಂಬಿದ್ದಾರೆ, ನಿನಗೆ ಗೊತ್ತೇ?. ಅಗ್ನಿ ಸಾಕ್ಷಿಯಾಗಿ ಹತ್ತು ಮಂದಿಯ ಎದುರಲ್ಲಿ ಕಟ್ಟಿರುವ ಮಂಗಳ ಸೂತ್ರಕ್ಕೆ ವಂಚನೆ ಮಾಡಿರುವ ವಂಚಕಿ ನೀನು'' ಎಂದು ಬಾಯಿಗೆ ಬಂದಂತೆ ಮಾತನಾಡುತ್ತಾನೆ. ಕಾಂತಿಯ ತಾಳ್ಮೆಯ ಕಟ್ಟೆ ಒಡೆಯುತ್ತದೆ. ಕೈ ಹಿಡಿದ ಗಂಡನೇ ಸಂಶಯದಿಂದ ಅಲ್ಲಸಲ್ಲದ ಆರೋಪ ಹೊರಿಸಿದ ಮೇಲೆ ಇನ್ನೆಲ್ಲಿಯ ತಾಳ್ಮೆ?. ಕಾಂತಿ ಪತಿಯನ್ನು ಪ್ರತಿಭಟಿಸಿದಳು. ಶೇಖರ ಮೊದಲೇ ಮುಂಗೋಪಿ. ಹೆಂಡತಿಯ ಕಟು ಟೀಕೆಯಿಂದ ಕಂಗೆಟ್ಟು ಕೈಯಲ್ಲಿದ್ದ ಪೌಡರಿನ ಡಬ್ಬಿಯನ್ನು ಅವಳತ್ತ ಬಲವಾಗಿ ಬೀಸುತ್ತಾನೆ. ಪೌಡರ್ ತುಂಬಿದ್ದ ಡಬ್ಬಿ ಕಾಂತಿಯ ಮೆದು ಕೆನ್ನೆಯನ್ನು ಅಪ್ಪಳಿಸಿದಾಗ......

'ಅಯ್ಯೋ ಅಮ್ಮಾ' ದೊಪ್ಪನೆ ನೆಲಕ್ಕೊರಗಿದಳು. ಕಾಂತಿ ಬರಿನೆಲದಲ್ಲಿ ಒದ್ದಾಡುತ್ತಿದ್ದರೂ ಶೇಖರ ಅತ್ತ ನೋಡಲೇ ಇಲ್ಲ. ಕೋಪ ಇಳಿದ ಮೇಲೆ ಕಾಂತಿ ಬಿದ್ದಿರುವಲ್ಲಿಗೆ ಬಂದಾಗ ಶೇಖರನ ಅಂಗಾಂಗಳು ಕಂಪಿಸತೊಡಗಿತು. ಕಾಂತಿಯ ಕಳೆಗುಂದಿದ ಮುಖ ಕಂಡಾಗಲೇ ಅವಳು ಬಹುದೂರದ ಯಾತ್ರೆ ಕೈಗೊಂಡಿದ್ದಾಳೆಂದು ಶೇಖರನಿಗೆ ತಿಳಿದು ಬಂತು. ಕೆಲವು ಹೊತ್ತು ಹಾಗೆ ಆಲೋಚನಾ ಮಗ್ನನಾಗಿ ನಿಂತ. ಪಕ್ಕನೆ ಏನೋ ಹೊಳೆದಂತಾಗಿ ಅವಸರದಿಂದ ಹೊರ ಬಂದು ಬಾವಿಕಟ್ಟೆಯಿಂದ ಹಗ್ಗವನ್ನು ತಂದು ಕಾಂತಿಯ ಕಳೇಬರದ ಕತ್ತಿಗೆ ಬಿಗಿದು ಮಾಡಿನ ಪಕ್ಕಾಸಿಗೆ ತೂಗು ಹಾಕಿ, ಬಾಗಿಲು ಮುಚ್ಚಿ ಚಿಲಕ ಹಾಕದೆ ಬ್ಯಾಂಕಿಗೆ ಕೆಲಸಕ್ಕೆಂದು ಹೊರಡುವನು.

ಕಾಂತಿಯ ಪ್ರೇಮಬಂಧನಕ್ಕೆ ಸಿಕ್ಕಿದ್ದ ಸೂರ್ಯ ಸಹೋದರಿಯನ್ನು ನೋಡಲು ಎಂದಿನಂತೆ ಬಂದಾಗ ಕಾಂತಿಯ ಮುಖ ದರ್ಶನವಾಗದೆ ಮುಚ್ಚಿದ್ದ ಬಾಗಿಲನ್ನು ದೂಡಿ ಒಳ ಬಂದು ನೋಡಿದ. ಏನೋ ತನ್ನಲ್ಲಿ ಕಣ್ಣು ಮುಚ್ಚಾಲೆ ಮಾಡುತ್ತಿರಬೇಕೆಂದು ನಿಧಾನವಾಗಿ ಮುಚ್ಚಿದ್ದ ಬಾಗಿಲು ದೂಡಿದಾಗ ಚಾವಡಿಯಲ್ಲಿ ಕಾಂತಿಯ ಹೆಣ ನೇತಾಡುವುದನ್ನು ಕಂಡು ಕೆಲ ಹೊತ್ತು ನಿಂತಲ್ಲೇ ಶಿಲೆಯಾಗಿ ಹೋದ. ಕಣ್ಣೀರ ಕೋಡಿ ತುಟಿಯಂಚಿನ ವರೆಗೆ ಇಳಿದು ಹನಿಹನಿಯಾಗಿ ಕೆಳಕ್ಕೆ ಉದುರುತ್ತಿರುವಾಗ ಕಾಂತಿಯ ಪ್ರೀತಿಯ ತುಣುಕುಗಳು ಒಂದೊಂದಾಗಿ ತನ್ನಿಂದ ದೂರ ಹೋಗುತ್ತದೆ ಎಂದು ಸೂರ್ಯನಿಗೆ ಭಾಸವಾಗುತ್ತದೆ.

''ನೀನು ಇಲ್ಲಿ ನಿಲ್ಲಬೇಡ, ಹೋಗು...'' ಎಂದು ಕಾಂತಿಯೇ ಹೇಳಿದಂತಾದಾಗ ಸೂರ್ಯ ಬಾಗಿಲು ಮುಚ್ಚಿ ಲಘುಬಗೆಯಿಂದ ಬೈಕ್ ಸ್ಟಾರ್ಟ್ ಮಾಡಿ ಹೊರಡುತ್ತಾನೆ. ಅಂದು ಶನಿವಾರ ಶೇಖರ ಮಧ್ಯಾಹ್ನ ಎರಡು ಗಂಟೆಗೆ ಮನೆಯ ಕಡೆಗೆ ಬರುತ್ತಿರುವಾಗ ದಟ್ಟ ಪೊದೆಯ ಮರೆಯಲ್ಲಿ ಅವನ ಆಗಮನವನ್ನೇ ಕಾಯುತ್ತಿದ್ದ ಗಂಗಮ್ಮ ಶೇಖರನನ್ನು ಕರೆದು ಸೂರ್ಯ ಬಂದು ಹೋದ ವಿಚಾರವನ್ನು ಹೇಳುತ್ತಾಳೆ. ಶೇಖರ ಗಂಗಮ್ಮನ ಮುಖವನ್ನೇ ನೋಡುತ್ತಿರುವಾಗ ಕಾಂತಿಗಿಂತಲೂ ವಿಶೇಷವಾದ ಆಕರ್ಷಣೆಯನ್ನು ಅವಳಲ್ಲಿ ಕಾಣುತ್ತಾನೆ. ಗಂಗಮ್ಮನಿಗೆ ಇಪ್ಪತ್ತೆರಡು ತುಂಬಿದರೂ ಹದಿನಾರರ ತರುಣಿಯಂತೆಯೇ ಕಾಣುತ್ತಿದ್ದಾಳೆ. ಶೇಖರನ ಬಲಿಷ್ಠವಾದ ತೋಳುಗಳು ಗಂಗಮ್ಮನ ಕೈಯನ್ನು ಹಿಡಿದಾಗ ಅವಳಿಗೆ ಸಂತಸ ಆಗುತ್ತದೆ. ಅತ್ತ ಸೂರ್ಯನ ಕಣ್ಣಂಚಿನಿಂದ ದುಃಖಾಶ್ರು ಹರಿಯುತ್ತಿದ್ದರೂ, ಶೇಖರ ಮತ್ತು ಗಂಗಮ್ಮನ ಕಣ್ಣಿನಲ್ಲಿ ಆನಂದಾಶ್ರು ಹರಿಯುತ್ತದೆ. ಶೇಖರ ಮತ್ತು ಗಂಗಮ್ಮ ಬೇಗ ಬೇಗನೆ ಮನೆಯತ್ತ ಸಾಗುತ್ತಾರೆ. ಕೈಯಲ್ಲಿದ್ದ ಬ್ಯಾಗನ್ನು ಗಂಗಮ್ಮನ ಕೈಗೆ ಕೊಟ್ಟು.....

''ಇದನ್ನು ಒಳಗೆ ಇಟ್ಟು ಬಾ... ನಾನೀ ಕ್ಷಣ ಮುಖ ತೊಳೆದು ಬರುತ್ತೇನೆ'' ಎಂದು ಅತ್ತಕಡೆ ಹೊರಟ. ಗಂಗಮ್ಮನಿಗೆ ಒಳಗೇನು ನಡೆದಿದೆ ಎಂಬ ವಿಚಾರವೇ ಗೊತ್ತಿಲ್ಲದೆ ಮೆನೇಜರರ ಬ್ಯಾಗನ್ನು ಹಿಡಿದುಕೊಂಡು ಮುಚ್ಚಿದ್ದ ಬಾಗಿಲು ದೂಡಿ ನೇತಾಡುತ್ತಿದ್ದ ಕಾಂತಿಯ ಕಳೇಬರವನ್ನು ಕಂಡು ಬೊಬ್ಬೆ ಹಾಕುತ್ತಾ ಹೊರಗೆ ಓಡಿ ಬಂದಾಗ ಶೇಖರ ಏನೂ ಅರಿಯದವನಂತೆ ಓಡೋಡಿ ಬಂದ. ಗಂಗಮ್ಮ ತೊದಲುತ್ತಾ ವಿಷಯ ತಿಳಿಸಿದಾಗ ಶೇಖರ ತಾನು ಮೊದಲೇ ಹಾಕಿಕೊಂಡಿರುವ ಪ್ಲಾನಿನಂತೆ ಕಪಾಟಿನ ಬಾಗಿಲು ತೆರೆದು ವಸ್ತುಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿ ಏನೂ ಅರಿಯದವನಂತೆ ಚಾವಡಿಯಲ್ಲಿ ಕಾಂತಿಯ ಕಳೇಬರದ ಹತ್ತಿರ ನಿಂತು ಮೊಸಳೆ ಕಣ್ಣೀರು ಸುರಿಸುತ್ತಾ ಪೋಲಿಸರಿಗೆ ಫೋನ್ ಮಾಡುತ್ತಾನೆ. ಸುದ್ದಿ ತಿಳಿದ ಜನರೆಲ್ಲ ವರಾಂಡದಲ್ಲಿ ಕಿಕ್ಕಿರಿದು ನೆರೆದಾಗ ಪೋಲೀಸ್ ವ್ಯಾನ್ ಅವರನ್ನು ಚದುರಿಸಿ ಅಂಗಳದಲ್ಲಿ ಬಂದು ನಿಂತಿತು. ಪೋಲೀಸ್ ಇನ್ಸ್‌ಪೆಕ್ಟರ್, ಗಂಗಮ್ಮ ಮತ್ತು ಶೇಖರನ ಹೇಳಿಕೆಗಳನ್ನೆಲ್ಲಾ ಬರೆದುಕೊಂಡು, ನೆರೆದಿದ್ದ ಜನರ ಸಮಕ್ಷಮದಲ್ಲಿ ಮನೆ ಶೋಧಿಸುವಾಗ ಬಾಗಿಲು ತೆರೆದಿರುವ ಕಪಾಟು ಅವರ ಗಮನ ಸೆಳೆಯುತ್ತದೆ. ಶೇಖರನ ಹೇಳಿಕೆಯಂತೆ ಕಾಂತಿಯ ಆಭರಣ ಕಾಣೆಯಾಗಿರುವುದನ್ನು ಬರೆದುಕೊಂಡು ಹೆಣವನ್ನು ಆಸ್ಪತ್ರೆಗೆ ಸಾಗಿಸುತ್ತಾರೆ. ಡಾಕ್ಟರರ ರಿಪೋರ್ಟಿನಂತೆ ಇದು ಆತ್ಮಹತ್ಯೆಯಲ್ಲ, ಯಾವುದೋ ಭಾರದ ವಸ್ತುವಿನಿಂದ ಹೊಡೆದು ಕೊಲೆ ಮಾಡಲ್ಪಟ್ಟಿದೆಯೆಂದು ತಿಳಿದು ಬಂದಾಗ ಪೋಲೀಸರು ಆರೋಪಿಯ ಶೋಧಕ್ಕೆ ತೊಡಗುತ್ತಾರೆ. ಶೇಖರ ಮತ್ತು ಗಂಗಮ್ಮನ ಸುಳ್ಳು ಸಾಕ್ಷಿಯಂತೆ ಪೋಲೀಸರು ಸೂರ್ಯನನ್ನು ಬಂಧಿಸಿದರು. ಸೂರ್ಯ ಬ್ಯಾಂಕಿನಲ್ಲಿ ಬಂಗಾರದ ನಗವನ್ನು ಒತ್ತೆ ಇಟ್ಟು ಹತ್ತು ಸಾವಿರ ರೂಪಾಯಿ ಪಡೆದುಕೊಂಡ ದಿನವೇ ಕಾಂತಿಯ ಕೊಲೆ ಆಗಿರುವುದಲ್ಲದೆ, ಆ ಬಂಗಾರದ ನಗಗಳು ಕಾಂತಿಯದ್ದೇ ಆಗಿರುವುದರಿಂದ ಒಡವೆಗೋಸ್ಕರವೇ ಸೂರ್ಯ ಕಾಂತಿಯನ್ನು ಕೊಲೆ ಮಾಡಿದ್ದಾನೆಂದು ವಕೀಲರು ಕೋರ್ಟಿನಲ್ಲಿ ವಾದಿಸಿದರು.

ಕಾಂತಿ ಕೊಲೆಯಾದ ದಿನ ಬೆಳಿಗ್ಗೆ ಎಂಟುವರೆ - ಒಂಬತ್ತು ಗಂಟೆಯ ಹೊತ್ತಿಗೆ ಸೂರ್ಯ ಕಾಂತಿಯ ಮನೆಗೆ ಬಂದಿದ್ದಾನೆನ್ನುವ ಗಂಗಮ್ಮನ ಪ್ರತ್ಯಕ್ಷ ಆದರೂ ಸುಳ್ಳು ಸಾಕ್ಷಿ ಇದೆಲ್ಲವನ್ನು ಮತ್ತಷ್ಟು ಪುಷ್ಟೀಕರಿಸಲ್ಪಡುವುದರಿಂದ ಸೂರ್ಯ ಆರೋಪಿ ಎಂದು ಕೋರ್ಟಿನಲ್ಲಿ ನಿರ್ಣಯಿಸಲಾಗಿ ಹತ್ತು ವರ್ಷದ ಕಠಿಣ ಸಜೆಯನ್ನು ನ್ಯಾಯಧೀಶರು ಮಂಜೂರು ಮಾಡಿದರು.

''ಬ್ಯಾಂಕಿನ ಮೆನೇಜರ್ ಶೇಖರ, ಸೂರ್ಯ ತಂದ ಆಭರಣಗಳನ್ನು ಹೇಗೆ ಗುರುತಿಸಲಾರದೆ ಹೋದರು?' ಎಂಬ ಆರೋಪಿಯ ಕಡೆಯ ವಕೀಲರ ಪಾಟಿ ಸವಾಲು ಸಾಕ್ಷಿಯೆದುರು ವ್ಯರ್ಥವಾಯಿತು. ಒಡಹುಟ್ಟಿದವರಿಲ್ಲದಿದ್ದರೂ ಅವರೊಳಗಿದ್ದ ಸಹೋದರತೆಯ ಪ್ರೇಮವನ್ನು ಸಮಾಜ ಗುರುತಿಸಲಾರದೆ ಆ ಸಹೋದರತೆಯ ವೃಕ್ಷ ಕೊಂಬೆ ರೆಂಬೆಗಳನ್ನು ಚಾಚದೆ ಬಾಡಿ ಬುಡ ಸಹಿತ ಕಿತ್ತು ಮಣ್ಣುಪಾಲಾಯಿತು.

ನಿರಪರಾಧಿ ಸೆರೆಮನೆಯಲ್ಲಿ ಕೊಳೆಯುತ್ತಿರುವಾಗ ನಿಜವಾದ ಅಪರಾಧಿ ಗಂಗಮ್ಮನ ಬರಿಮೈಯ ಸೌಂದರ್ಯವನ್ನು ಹೀರುತ್ತಾ ವಿಜಯ ಪತಾಕೆಯನ್ನು ಹಾರಿಸಿ ಮತ್ತಿನಿಂದ ಮರೆಯುತ್ತಾ ಇದ್ದಾನೆ. ಸೂರ್ಯ ಕಾಂತಿಗುಂದಿ ಪಡು ಕಡಲ ತಡಿಯಲ್ಲಿ ಮುಳುಗಿದಾಗ ಸೂರ್ಯಕಾಂತಿ ಬಾಡಿ ಬಸವಳಿದು ಗಿಡದ ತೊಟ್ಟಿನಲ್ಲಿ ಕೆಳಮುಖ ಮಾಡಿ ನೇತಾಡುತ್ತಿರುವಾಗ, ಕಾಂತಿವಿಹೀನನಾದ ಸೂರ್ಯ ಸೆರೆಮನೆಯಲ್ಲಿ ನರಕಯಾತನೆ ಅನುಭವಿಸುತ್ತಾ ಇದ್ದಾನೆ. ಅವನ ಹೆತ್ತವ್ವೆ ಇದಾವುದರ ಅರಿವಿಲ್ಲದೆ ದೀರ್ಘ ಶ್ವಾಸವನ್ನೆಳೆಯುತ್ತಾ ಮಗನ ದಾರಿಯನ್ನೇ ನೋಡುತ್ತಾ ನೆರೆಕರೆಯವರ ಆರೈಕೆಯಿಂದಿದ್ದರೂ, ತನ್ನ ಕೊನೆಯುಸಿರೆಳೆಯಲು ಉದ್ಯುಕ್ತಳಾಗಿದ್ದಾಳೆ.

●

# 'ಕನ್ನಡದ ಕನ್ನಡಿ'ಯಲ್ಲಿ ಕೆ.ರಘನಾಥ್ ಅವರು ಕಂಡ ಚಿತ್ರಣ

ಕಳೆದ ಇಪ್ಪತ್ತೆಂಟು ವರ್ಷಗಳಿಂದ ಮುಂಬಯಿಯಲ್ಲಿ ಕನ್ನಡದ ಕೈಂಕರ್ಯವನ್ನು ಮಾಡುತ್ತಿರುವ ಡಾ. ಕೆ. ರಘುನಾಥ ಅವರು ಉಪನ್ಯಾಸಕರಾಗಿ, ಅಂಕಣ ಬರಹಗಾರರಾಗಿ ಹೆಸರುವಾಸಿಯಾದವರು. ಝುನ್ ಝುನ್ ಕಾಲೇಜಿನಲ್ಲಿ ಕನ್ನಡ ವಿಭಾಗವನ್ನು ಮುನ್ನಡೆಸುತ್ತಾ ಬರುತ್ತಿರುವ ಅವರು ಮುಂಬಯಿ ಕನ್ನಡಿಗರ ಮೆಚ್ಚುಗೆಗೆ ಪಾತ್ರರಾದವರು.

ಅವರ ಇತ್ತೀಚೆಗೆ ಬಿಡುಗಡೆ ಕಂಡ ಕೃತಿ 'ಕನ್ನಡದ ಕನ್ನಡಿಯಲ್ಲಿ' ಒಂದು ಅಪರೂಪದ ಕೃತಿ. ಬೆಂಗಳೂರಿನ ನೆಲಮಲೆ ಪಬ್ಲಿಷಿಂಗ್ ಹೌಸ್ ಇವರು ಈ ಕೃತಿಯನ್ನು ಹೊರತಂದಿದ್ದಾರೆ. ಈ ಕೃತಿಯ ಕುರಿತು ಲೇಖಕರೇ ಹೇಳುವಂತೆ "ಮುಂಬಯಿಯಲ್ಲಿ ಕನ್ನಡ ಶಿಕ್ಷಣ ಸಂಸ್ಥೆಗಳು, ಕನ್ನಡ ಸಂಘಗಳ ಜೊತೆ ಅವಿನಾಭಾವ ಸಂಬಂಧವಿದ್ದು ಉದಯವಾಣಿಯಲ್ಲಿ ಬರೆದ ಅಂಕಣಬರಹಗಳು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳು ಇದರಲ್ಲಿ ಪ್ರಕಟವಾಗಿವೆ. ಆದ್ದರಿಂದಲೇ ಇದು ಅಮೂಲ್ಯವಾದ ಕೃತಿಯಾಗಿದೆ.


ಕೃತಿಯೊಳಗೆ 29 ಲೇಖನಗಳು ಹಾಗೂ 29 ಅಂಕಣಬರಹಗಳಿವೆ. ಮುಂಬಯಿಯ ಸಾಹಿತ್ಯ ಲೋಕದಲ್ಲಿ ಒಬ್ಬ ಉತ್ತಮ ವಿಮರ್ಶಕರಾಗಿ ಗುರುತಿಸಿಕೊಂಡಿರುವ ರಘುನಾಥ ಅವರು ಹಲವಾರು ಮೌಲಿಕ ಕೃತಿಗಳನ್ನು ವಸ್ತುನಿಷ್ಠ ವಿಮರ್ಶೆಗೆ ಒಳಪಡಿಸಿದ್ದಾರೆ. ಆರಂಭದಲ್ಲಿಯೇ ನವೋದಯ ಸಾಹಿತ್ಯದ ಮೇರು ವ್ಯಕ್ತಿತ್ವದ ರಾಷ್ಟ್ರಕವಿ ಗೋವಿಂದ ಪೈ ಅವರು ಕನ್ನಡ ವಾಙ್ಮಯಕ್ಕೆ ನೀಡಿದ ಕೊಡುಗೆಯನ್ನು ಅವಲೋಕಿಸಿರುವ ಲೇಖಕರು ಜಡ್ಡುಕಟ್ಟಿದ್ದ ವೈದಿಕಧರ್ಮಕ್ಕೆ ಕಾಯಕಲ್ಪವನ್ನು ಒದಗಿಸಿದ ಎರಡು ಖಂಡಕಾವ್ಯಗಳಾದ 'ಗೋಲ್ಗೋಥಾ ಮತ್ತು ವೈಶಾಖಿ'ಗಳ ಮಹತ್ವವನ್ನು ಬಹಳ ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ. ಒಂದು ರೀತಿಯಲ್ಲಿ ಗೋವಿಂದ ಪೈ ಅವರಿಗೆ ಸಂದ ನುಡಿನಮನವೆನ್ನಬಹುದು.

ಎಂ.ಎಂ.ಕಲ್ಬುರ್ಗಿಯವರ 'ಮಾರ್ಗ' ಕೃತಿ ಸಮೀಕ್ಷೆ ಮಾಡಿದ ರಘುನಾಥ್ ಅವರು ಆ ಕೃತಿಯಲ್ಲಿ ತಾನು ಕಂಡುಕೊಂಡ ನ್ಯೂನತೆಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸಿರುವುದು ಮೆಚ್ಚತಕ್ಕಂತಹ ವಿಷಯ. ಬ್ರಾಹ್ಮಣರು ಬರೆದ ಸಾಹಿತ್ಯವನ್ನು ಬ್ರಾಹ್ಮಣ ಸಾಹಿತ್ಯವೆಂದು ಕರೆಯುವುದಾದರೆ, ಬಸವಣ್ಣ ಬರೆದದ್ದು ಯಾಕೆ ಬ್ರಾಹ್ಮಣ ಸಾಹಿತ್ಯವಾಗಬಾರದು? ಎಂದು ಪ್ರಶ್ನಿಸಿರುವ ಲೇಖಕರು ಕಲ್ಬುರ್ಗಿಯವರ ಸಮೀಕ್ಷೆಗಳಲ್ಲಿನ ವಸ್ತುನಿಷ್ಠತೆ, ಪ್ರಾಮಾಣಿಕತೆ ಮತ್ತು ತತ್ಪರತೆಗಳನ್ನು ಕೂಡಾ ಮೆಚ್ಚಿಕೊಂಡಿದ್ದು ವಿಮರ್ಶಕನ ಒಳನೋಟ ಹೇಗಿರಬೇಕೆನ್ನುವುದಕ್ಕೆ ಇದು ಉತ್ತಮ ನಿದರ್ಶನವಾಗಿದೆ.

ತಾಳ್ತಜೆ ವಸಂತ ಕುಮಾರ್ ಅವರ ಕೃತಿಯ ವಿಹಾರ ಮಾಡಿರುವ ರಘುನಾಥ್ ಅವರು ಅಲ್ಲಲ್ಲಿ ತಂಗುತ್ತಾ ಕಾವ್ಯ ವಿಹಾರ, ಭೌದ್ಧ ವಿಹಾರ, ಶಾಸ್ತ್ರ ವಿಹಾರ, ಜಾನಪದ ವಿಹಾರ, ಚಿಂತನ ವಿಹಾರ, ಸಮಕಾಲೀನ ಸಾಹಿತ್ಯ ವಿಹಾರ ಹೀಗೆ ಒಂದೊಂದೇ ದ್ವಾರಗಳನ್ನು ಪ್ರವೇಶಿಸುತ್ತಾ ಅತ್ಯಂತ ಸೂಕ್ಷವಾಗಿ ಅವಲೋಕಿಸಿರುವುದು ವಿಮರ್ಶಕನ ಸೂಕ್ಷ್ಮ ದೃಷ್ಟಿಕೋನಕ್ಕೆ ಸಾಕ್ಷಿ.

ಕನ್ನಡ ಕಥನ ಕಾವ್ಯಕ್ಕೆ ಹೊಸತನವನ್ನು ತಂದುಕೊಟ್ಟ ಸು.ರಂ.ಎಕ್ಕುಂಡಿ ಅವರ 'ರೊಟ್ಟಿ ಮತ್ತು ಕೋವಿ', 'ಇಬ್ಬರು ರೈತರು', ' ಹಿಟ್ಟು ಮತ್ತು ಮಲ್ಲಿಗೆ' ಈ ಕವನಗಳ ಒಳಹೊಕ್ಕು ಕವಿತೆಯಲ್ಲಿ ಅಡಗಿರುವ ಸೊಬಗನ್ನು ವರ್ಣಿಸಿದ್ದಾರೆ. ಹಿಟ್ಟು ಮತ್ತು ಮಲ್ಲಿಗೆ ಒಂದು ಹಸಿವಿನ ದ್ಯೋತಕವಾದರೆ ಇನ್ನೊಂದು ಸೌಂದರ್ಯದ ಪ್ರತೀಕ. ಆದರೆ ಲೇಖಕರು ಕವಿಯ ಭಾವ ಅವರು ತಳೆಯುವ ನಿಲುವು ಸಂದಿಗ್ಧ ಅರ್ಥಕ್ಕೆ ಕಾರಣವಾಗುತ್ತದೆ ಎಂಬ ಸತ್ಯವನ್ನು ಬರೆಯಲು ಮರೆಯಲಿಲ್ಲ.

ಪು.ತಿ.ನ ಅವರ ಸುಂದರವಾದ 'ಕೊಳಲು ಮತ್ತು ಬೂಟುಗಾಲಿನ ಸದ್ದು' ಕವನದಲ್ಲಿ ಶ್ರೀ ಹರಿಚರಿತೆಯ ಗೋಕುಲ ಪ್ರಸ್ಥಾನಕ್ಕೆ ಮುನ್ನಿನ ಒಂದು ಸನ್ನಿವೇಶವನ್ನು ಬಹಳ ಸುಂದರವಾಗಿ ಚಿತ್ರಿಸಿದ್ದಾರೆ. ಇಲ್ಲಿ ಲೇಖಕರು ಈ ಕವಿತೆಯ ಒಳ ಹೊರಗನ್ನು ಆಳವಾಗಿ ಅಧ್ಯಯನ ಮಾಡಿ ಅನೇಕ ಪ್ರಶ್ನೆಗಳನ್ನು ಎಸೆದು ಆ ಕುರಿತು ಓದುಗರು ಚಿಂತಿಸುವಂತೆ ಮಾಡಿದ್ದಾರೆ.



**– ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ**

ವೀರಪ್ಪ ಮೊಯಿಲಿಯವರ 'ಶ್ರೀ ರಾಮಾಯಣ ಮಹಾನ್ವೇಷಣಂ'ನ ವೈಶಿಷ್ಟ್ಯತೆಯನ್ನು ಸೀತೆಯ ಪಾತ್ರದ ವೈಶಿಷ್ಯತೆ, ಸ್ವಂತಿಕೆಯನ್ನು ಪಡೆಸಿರುವ ತಾರೆ, ರುಮೆಯರು, ರಾಮಾಭ್ಯುದಯದಲ್ಲಿ ತಮ್ಮ ಅಭ್ಯುದಯವನ್ನು ಕಾಣುವ ದೂರದೃಷ್ಟಿಯ ಊರ್ಮಿಳೆ, ಕಾಮುಕ ಇಂದ್ರನ ಕುಹಕಕ್ಕೆ ಬಲಿಯಾದ ಅಹಲ್ಯೆ, ರಾಮನ ನಿರೀಕ್ಷೆ ಯಲ್ಲಿ ಜೀವನ ಕಳೆದ ಶಬರಿ, ಶೂರ್ಪನಖಿ ಈ ಎಲ್ಲಾ ಸ್ತ್ರೀಪಾತ್ರವನ್ನು ರಘುನಾಥ ಅವರು ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಈ ಕೃತಿಯಲ್ಲಿ ಬೇಂದ್ರೆಯವರ ಸಮಗ್ರ ಕಾವ್ಯ ದರ್ಶನದ ಚಿಂತನೆಯಿದೆ, ಗಿರೀಶ್ ಕಾರ್ನಾಡರ ಒಡಲ ಮೀಮಾಂಸೆಯನ್ನು ವಿಭಿನ್ನವಾಗಿ ವಿಶ್ಲೇಷಿಸಿರುವ ರೀತಿ ಸೋಜಿಗವನ್ನುಂಟುಮಾಡುತ್ತದೆ. ಕನ್ನಡ ಭಾಷೆಯ ಬಗ್ಗೆ ಆತಂಕವನ್ನು ವ್ಯಕ್ತಪಡಿಸುತ್ತಾ ರಘುನಾಥ್ ಅವರು ಕನ್ನಡವನ್ನು ಅನ್ನದ ಭಾಷೆಯನ್ನಾಗಿ ಮಾಡುವುದರ ಕುರಿತು ಚಿಂತಿಸಿರುವುದು, 'ಮುಂಬಯಿಯಲ್ಲಿ ಕನ್ನಡದ ಭವಿಷ್ಯ, 'ಮಹಾರಾಷ್ಟ್ರದಲ್ಲಿ ಕನ್ನಡ ಶಿಕ್ಷಣದ ಸವಾಲುಗಳು' ಮುಂತಾದ ಲೇಖನಗಳ ಮೂಲಕ ಕನ್ನಡ ಭಾಷೆಯ ಉಳಿವಿಗಾಗಿ ನಾವು ಯಾವ ರೀತಿಯ ಹೋರಾಟ ಮಾಡ ಬಹುದು ಎನ್ನುವುದರ ಕುರಿತು ವಿಶ್ಲೇಷಿಸಿರುವುದು ಅವರ ಕನ್ನಡ ಭಾಷಾ ಪ್ರೇಮಕ್ಕೆ ಸಾಕ್ಷಿ.

ಅಂಕಣ ಬರಹಗಳತ್ತ ಗಮನ ಹರಿಸಿದಾಗ ವಾಸ್ತವ ಜಗತ್ತಿಗೆ ನಿಕಟವಾಗಿರುವ ವಿಷಯಗಳತ್ತ ಕ್ಷ-ಕಿರಣವನ್ನು ಬೀರಿದ್ದಾರೆ. ಪ್ರಸ್ತುತ ವಿದ್ಯಮಾನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅದಕ್ಕೆ ಸೂಕ್ತವಾದ ಕೆಲವು ಸನ್ನಿವೇಶಗಳನ್ನು ನಿದರ್ಶನವಾಗಿ ನೀಡಿ ಬರೆದ ಒಂದೊಂದು ಲೇಖನಗಳೂ ಮೌಲಿಕವಾದುದು. ಅನಾದಿ ಕಾಲದಿಂದಲೂ ನಡೆದು ಬಂದ ಗುರುಶಿಷ್ಯರ ಸಂಬಂಧ, ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ವ್ಯಾವಹಾರಿಕ ದೃಷ್ಟಿ ಕೋನಗಳು ಓದುಗನೆದುರು ಬಿಚ್ಚಿಡುವ ಪರಿ ವಿಶಿಷ್ಟವಾದುದು. ನಿಸ್ಸಾರ್ ಅಹಮದ್ ಅವರ ಕವಿತೆಯ ತಿರುಳಿನ ಮೂಲಕ ಪರಿವರ್ತನೆ ಎನ್ನುವುದು ಅಂತರಂಗದಲ್ಲಿ ಆದಾಗ ಬಹಿರಂಗದಲ್ಲಿ ಅದು ತಾನಾಗಿ ಸಂಭವಿಸುತ್ತದೆ. ಅದು ಅವರವರ ಇಚ್ಛೆಯಿಂದ ಆಗಬೇಕೇ ಹೊರತು ಅದನ್ನು ಬಲಾತ್ಕಾರದಿಂದ ತರುವುದು ತರವಲ್ಲ ಎಂದು ಕಾವ್ಯವನ್ನು ಮಾರ್ಮಿಕವಾಗಿ ವರ್ಣಿಸಿದ್ದಾರೆ.

ಡಾ. ರಘುನಾಥ ಅವರು ತುಂಬಾ ಪುಸ್ತಕಗಳನ್ನು ರಚಿಸಿ ಸಂಖ್ಯೆಗಳನ್ನು ಹೆಚ್ಚಿಸುವಲ್ಲಿ ಆಸಕ್ತಿ ತೋರುವವರಲ್ಲ. ಆದರೆ ಅವರ ಈ ಕೃತಿಯಲ್ಲಿನ ಒಂದೊಂದು ಲೇಖನವೂ ಬಹಳ ಅಮೂಲ್ಯವಾಗಿದ್ದು ಓದುಗನನ್ನು ಆಯಾಯ ವಿಷಯಗಳ ಕುರಿತು ಚಿಂತಿಸುವಂತೆ ಮಾಡುತ್ತದೆ. ಈ ಕೃತಿಯಲ್ಲಿ ಡಾ.ರಘುನಾಥ್ ಅವರ ಓದಿನ ಆಳ, ವಿಸ್ತಾರ ಹಾಗೂ ಓದಿದ ವಿಷಯಗಳನ್ನು ಮನನ ಮಾಡಿಕೊಂಡ ರೀತಿ ಗಮನಾರ್ಹವಾದುದು. ವಸ್ತುನಿಷ್ಠ ವಿಮರ್ಶೆಯ ಮೂಲಕ ಅವರು ಓದುಗರ ಗಮನಸೆಳೆಯುತ್ತಾರೆ. ಅವರು ಆರಿಸಿಕೊಂಡ ವಸ್ತು, ಅದನ್ನು ನಿಪುಣತೆಯಿಂದ ಚಿತ್ರಿಸಿದ ರೀತಿ ಅವರ ಬರವಣಿಗೆಯ ಕೌಶಲತೆಗೆ ಸಾಕ್ಷಿ. ಅದರಲ್ಲಿ ವ್ಯಕ್ತಿ ಚಿತ್ರಗಳಿವೆ, ಪುಸ್ತಕ ವಿಮರ್ಶೆಯಿದೆ, ಶೈಕ್ಷಣಿಕ ಚಿಂತನೆಯಿದೆ, ಮಕ್ಕಳ ಕುರಿತಾದ ಕಾಳಜಿಯಿದೆ, ನಮ್ಮ ಆಚಾರ ವಿಚಾರ, ಸಂಸ್ಕೃತಿಯ ಕುರಿತಾದ ಚಿಂತನೆಯಿದೆ.

■

# 69ನೇ ಸ್ವಾತಂತ್ರ್ಯ ದಿನಾಚರಣೆ

ಆಗಸ್ಟ್ 15, 2015





## ನಾಡಿನ ಜನತೆಗೆ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು

ಸಿದ್ಧರಾಮಯ್ಯ
ಮುಖ್ಯಮಂತ್ರಿಗಳು

ಆರ್. ರೋಷನ್ ಬೇಗ್
ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು

"ಬಡತನ, ಅನಕ್ಷರತೆ ಮತ್ತು ಅಸಮಾನತೆಗಳಿಂದ ಮುಕ್ತಿ ಹೊಂದುವುದೇ ನಿಜವಾದ ಸ್ವಾತಂತ್ರ್ಯ"
– ಮಹಾತ್ಮ ಗಾಂಧೀಜಿ

### ಜನಕಲ್ಯಾಣ ಯೋಜನೆಗಳು

**ಬದುಕು ಬೇಸಾಯ: ರೈತಬಂಧುಗಳಿಗೆ ಸಾಂತ್ವನ**

- ರೈತರಿಗೆ ರೂ. 3 ಲಕ್ಷದವರೆಗೆ ಶೂನ್ಯ ಬಡ್ಡಿ ದರದಲ್ಲಿ 9215.49 ಕೋಟಿ ರೂ. ಸಾಲ ನೀಡಿಕೆ, 21.33 ಲಕ್ಷ ರೈತರಿಗೆ ಪ್ರಯೋಜನ.
- ಅಕ್ರಮ ಲೇವಾದೇವಿ ವ್ಯವಹಾರಕ್ಕೆ ಕಡಿವಾಣ. ದುಬಾರಿ ಬಡ್ಡಿ ವಸೂಲಿ ಮಾಡುವ ಲೇವಾದೇವಿಗಾರರ ಮೇಲೆ ಕಠಿಣ ಕಾನೂನು ಕ್ರಮ. ಸಾಲ ವಸೂಲಾತಿಗೆ ತಾತ್ಕಾಲಿಕ ತಡೆ.
- ರೈತ ಬಂಧುಗಳಲ್ಲಿ ಆತ್ಮಸ್ಥೈರ್ಯ ಮೂಡಿಸಲು ಸಾಂತ್ವನ ಸಭೆಗಳು.

**ಅನ್ನ ಭಾಗ್ಯ – ಹಸಿವು ಮುಕ್ತ ಕರ್ನಾಟಕ**

- ಬಿಪಿಎಲ್ ಕುಟುಂಬದ ಪ್ರತಿ ಸದಸ್ಯರಿಗೆ 5 ಕೆ.ಜಿ ಉಚಿತ ಆಹಾರ ಧಾನ್ಯ ವಿತರಣೆ
- 25 ರೂ.ಗೆ 1 ಲೀಟರ್ ತಾಳೆ ಎಣ್ಣೆ ಮತ್ತು 2 ರೂ.ಗೆ 1 ಕೆ.ಜಿ. ಅಯೋಡಿನ್‌ಯುಕ್ತ ಉಪ್ಪು
- 2,120 ಕೋಟಿ ರೂ. ವೆಚ್ಚ, 1.07 ಕೋಟಿ ಫಲಾನುಭವಿಗಳು.

**ಕ್ಷೀರಭಾಗ್ಯ – ಸದೃಢ ಮಕ್ಕಳು**

- ಅಂಗನವಾಡಿ ಮಕ್ಕಳಿಗೆ ಹಾಗೂ ಸರ್ಕಾರಿ ಶಾಲೆಯ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರದಲ್ಲಿ ಮೂರು ದಿನ 150 ಮಿಲೀ ಬಿಸಿ ಹಾಲು ನೀಡಿಕೆ.
- ಅಂದಾಜು 1.04 ಕೋಟಿ ಮಕ್ಕಳಿಗೆ ಪ್ರಯೋಜನ.

**ರಾಜೀವ್ ಆರೋಗ್ಯ ಭಾಗ್ಯ – ಎಲ್ಲರಿಗೂ ಆರೋಗ್ಯ**


- ಎಲ್ಲರಿಗೂ ಆರೋಗ್ಯ ಭಾಗ್ಯ ನೀಡಿದ ದೇಶದ ಮೊದಲ ರಾಜ್ಯ.
- ಗ್ರಾಮೀಣ ಮತ್ತು ನಗರ ಪ್ರದೇಶದ ಸುಮಾರು 4 ಕೋಟಿಗೂ ಹೆಚ್ಚು ಜನರಿಗೆ ಆರೋಗ್ಯ ಸುರಕ್ಷೆ.

**ಕ್ಷೀರಧಾರೆ – ಹೈನುಗಾರಿಕೆಗೆ ಉತ್ತೇಜನ**


- ರಾಜ್ಯದ ಗ್ರಾಮೀಣ ಪ್ರದೇಶದ ಹೈನುಗಾರಿಕೆ ಕುಟುಂಬಗಳಿಗೆ ಪ್ರತಿ ಲೀಟರ್ ಹಾಲಿಗೆ ನೀಡುವ ಪ್ರೋತ್ಸಾಹ ಧನ 4 ರೂ.ಗೆ ಏರಿಕೆ. 7.40 ಲಕ್ಷ ಹೈನುಗಾರರು ಫಲಾನುಭವಿಗಳು.

**ವಸತಿ ಭಾಗ್ಯ – ಗುಡಿಸಲು ಮುಕ್ತ ರಾಜ್ಯ**


- ಕಳೆದ 2 ವರ್ಷಗಳಲ್ಲಿ ಒಟ್ಟು 4,555 ಕೋಟಿ ರೂ. ವೆಚ್ಚದಲ್ಲಿ 6.19 ಲಕ್ಷ ಮನೆಗಳ ನಿರ್ಮಾಣ
- ಗೃಹ ನಿರ್ಮಾಣ ಸಹಾಯಧನ 75 ಸಾವಿರ ರೂ.ಗಳಿಂದ 1.20 ಲಕ್ಷ ರೂ.ಗಳಿಗೆ ಹೆಚ್ಚಳ




ಕೃಷಿ ಭಾಗ್ಯ



ವಿದ್ಯಾಸಿರಿ



ಕ್ಷೀರ ಭಾಗ್ಯ



ಶುದ್ಧ ಕುಡಿಯುವ ನೀರಿನ ಘಟಕ



ರಾಜೀವ್ ಆರೋಗ್ಯ ಭಾಗ್ಯ

**ವಿದ್ಯಾಸಿರಿ**

- ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಹಾಸ್ಟೆಲ್ ವಂಚಿತ ವಿದ್ಯಾರ್ಥಿಗಳಿಗೆ ಪ್ರತಿ ಶೈಕ್ಷಣಿಕ ವರ್ಷಕ್ಕೆ 15,000 ರೂ.ಗಳ ಊಟ ಮತ್ತು ವಸತಿ ಭತ್ಯೆ.
- 75 ಸಾವಿರ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಉತ್ತೇಜನ.

**ಮಹಿಳಾ ಸಬಲೀಕರಣ : ಸಶಕ್ತ ಮಹಿಳೆ – ಸಶಕ್ತ ಜೀವನ**

- ಸ್ತ್ರೀಶಕ್ತಿ ಗುಂಪುಗಳಿಗೆ ನೀಡುವ ಆವರ್ತ ನಿಧಿ 25000 ರೂ.ವರೆಗೆ ಹೆಚ್ಚಳ
- ಬಾಲ್ಯ ವಿವಾಹ ತಡೆಗಟ್ಟಲು ವಿವಾಹಗಳ ನೋಂದಣೀಕರಣ ಕಡ್ಡಾಯ

**ಗ್ರಾಮೀಣಾಭಿವೃದ್ಧಿ – ಹಳ್ಳಿಗಳ ಏಳಿಗೆಗೆ ಆದ್ಯತೆ**

- ಗ್ರಾಮೀಣ ಜನತೆಯ ಜೀವನ ಮಟ್ಟ ಸುಧಾರಣೆಗೆ 15 ಅಂಶಗಳ ಕಾರ್ಯಕ್ರಮ ಜಾರಿ
- 8.76 ಲಕ್ಷ ವೈಯುಕ್ತಿಕ ಗೃಹ ಶೌಚಾಲಯಗಳ ನಿರ್ಮಾಣ, ರಾಷ್ಟ್ರದಲ್ಲಿಯೇ ಶೇ. 117 ರಷ್ಟು ಸಾಧನೆ ಮಾಡಿದ ಏಕೈಕ ರಾಜ್ಯ ಎಂಬ ಕೀರ್ತಿ.

**ಶುದ್ಧ ಕುಡಿಯುವ ನೀರು – ಜನಸಾಮಾನ್ಯರಿಗೂ ಶುದ್ಧ ಕುಡಿಯುವ ನೀರು**

- 1000 ಶುದ್ಧ ಕುಡಿಯುವ ನೀರಿನ ಘಟಕಗಳ ಗುರಿ, 515 ಘಟಕಗಳು ಸಾರ್ವಜನಿಕರಿಗೆ ಸಮರ್ಪಣೆ, 875 ಘಟಕಗಳ ಕಾಮಗಾರಿ ಪೂರ್ಣ, 360 ಘಟಕಗಳು ಅಂತಿಮ ಹಂತದಲ್ಲಿ.

**ಋಣಮುಕ್ತ – ಹೊಸಬದುಕಿನ ಆಶಯಕ್ಕೆ ಮುನ್ನುಡಿ**

- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರು ವಿವಿಧ ನಿಗಮಗಳಿಂದ ಪಡೆದಿದ್ದ 1340 ಕೋಟಿ ರೂ.ಗಳ ಸಾಲ ಮನ್ನಾ, ಸುಮಾರು 10.18 ಲಕ್ಷ ಮಂದಿ ಫಲಾನುಭವಿಗಳು.

ಪ್ರಕಟಣೆ: ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ


ಕರ್ನಾಟಕ ವಾರ್ತೆ

# Congratulations

Kum. Ditya Ravi is studying in Std XI in DAV Public



School, Airoli Navi Mumbai, affiliated to CBSE Board. Ditya is a bright student. She had scored 10 out 10 percentile in X (SSC) Exams. She is also interested in Arts. She is a good artist and makes beautiful Rangoli art. She draws very well. She is into learning Classical Karnatak Vocal singing and she also takes part in all extra-curricular activities of her school. Recently, she




participated in the All India level Drawing Competition on 'Make Teaching A National Mission' and won a prize among entries for 9th to 12th Std Students. This was a part of the Teachers' Day Celebrations at CBSE. The accompanying drawing proves that point very well.

Our Hearty congratulations to Ditya. Hope her Art thrives and wins many more laurels for her.

Ditya is the daughter of our members, Smt. Padma and Shri. A. Ravi.

Congratulations to the proud parents as well.

## UDAD DAL LADDU



**INGREDIENTS:**

1) UDAD DAL - 1 CUP
2) RICE FLOUR - ½ CUP
3) GHEE - ½ CUP
4) SUGAR - 1¼ CUP
5) ELACHI - 5-6
6) CASHEW - 10
7) COPRA - ½ CUP

**Method:**

1) Roast the udad dal and rice flour
2) Grind the roasted dal into powder
3) Grind the sugar. Mix all and pour the hot ghee on it.
4) Put the elachi powder
5) Make the ladoos from that

## STEAMED VEGETABLE DAL VADA



**INGREDIENTS:**

THOOR DAL – 1 CUP
CHANA DAL – 1 CUP
SWEET CORN – 1 CUP
CABBAGE – 1 CUP
ONION – 3
GREEN CHILI – 5-6
CORIANDER – 1 BUNCH
GINGER – 1 BIG PIECE
SALT

1) SOAK BOTH THE DALS FOR 3 HOURS
2) GRIND THE DALS & SWEET CORN INTO COARSE
3) CUT CABBAGE, ONION, CHILLI, CORIANDER, GINGER
4) MIX ALL INGREDIENTS TOGETHER ADD SALT.
5) PUT INTO GREESED BOWL AND STEAM FOR 15-20 MINUTES

**- Lata Upadhya**

Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.

# ಅಸೋಸಿಯೇಶನ್‌ನಲ್ಲಿ...




ಭಕ್ತಿಗಾನಕ್ಕೆ ಅಳವಡಿಸಿದ ನರ್ತನ ಸೇವೆಯಾಯ್ತು. ತದನಂತರ ಸಹಸ್ರ ನಾಮಾರ್ಚನೆ, ಮಹಾ ಮಂಗಳಾರತಿ ಸಮರ್ಪಿಸಲಾಯಿತು. ಮಹಿಳೆಯರು ಸ್ವರ್ಣಗೌರಿಗೆ ಸೋಬಲಕ್ಕಿ ಉಪ್ಪಕ್ಕಿ ಇಟ್ಟು ಆರತಿ ಎತ್ತಿದರು. ಈ ದಿನದ ಪೂಜಾ ಕಾರ್ಯವನ್ನು ಶ್ರೀಮತಿ ಮಂಗಳಾ ಮತ್ತು ಶ್ರೀ. ರಾಧಾಕೃಷ್ಣ ಅವರು



ನೆರವೇಸಿಕೊಟ್ಟರು.

'ಗಣಪತಿ ಬಪ್ಪಾ ಮೋರಯಾ', 'ಸ್ವರ್ಣಗೌರೀ ಕಿ ಜಯ್', ಅಸೋಸಿಯೇಶನ್ ಗಣಪತೀ ಕಿ ಜಯ್' ಮೊದಲಾದ ಉದ್ಘೋಷಗಳೊಡನೆ ವಿಸರ್ಜನೆ ಸಾಂಗವಾಗಿ ನೆರವೇರಿ ದೇವಮೂರ್ತಿಗಳನ್ನು ಮೆರವಣಿಗೆಗೆ ಸಜ್ಜಾದ ವಾಹನದಲ್ಲಿ ರಿಸಲಾಯ್ತು. ಹಾಡು ಘೋಷಗಳೊಡನೆ ಹೊರಟ ಮೆರವಣಿಗೆ ದಾದರ್ ಸಮುದ್ರ ತೀರದಲ್ಲಿ ಕೊನೆಗೊಂಡಿತು. ಸದಸ್ಯರಾದ ಸುಧಾಕರ, ರಂಗನಾಥ, ಉದಯ ಮತ್ತಿತರರು ದೇವಮೂರ್ತಿಗಳನ್ನು ಸಮುದ್ರದಲ್ಲಿ ವಿಸರ್ಜಿಸಿ ಹಿಂದಿರುಗಿದರು.



## ಮುಂಬರುವ ಕಾರ್ಯಕ್ರಮಗಳು:

ಶರನ್ನವರಾತ್ರಿ ಪ್ರಯುಕ್ತ ಇದೇ ತಿಂಗಳ ರವಿವಾರ ತಾ। 18.10.2015 ರಂದು ಸಂಜೆ 4.00 ಗಂಟೆಗೆ ಮೈಸೂರು ಅಸೋಸಿಯೇಷನ್‌ನಲ್ಲಿ ಶ್ರೀ ಶಾರದಾ ಪೂಜೆಯನ್ನು ನಡೆಸಲಾಗುವುದು. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಯಾಗುವಂತೆ ಮಾಡಬೇಕೆಂದು ವಿನಂತಿ. ಪೂಜೆಯ ನಂತರ ಕೋಲಾಟ, ಹಾಡು, ಚುಕ್ಕಿ **ರಂಗೋಲಿ ಸ್ಪರ್ಧೆ** ಹಾಗೂ ಇತರ ಆಟಗಳು ನಡೆಯುವವು. ಕೋಲಾಟದಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಕೋಲು ಗಳನ್ನು, ರಕ್ಷ ಪೋಷಾಕನ್ನು ತಾವೇ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

ಆಟಗಳ ನಂತರ ಪ್ರಸಾದ ವಿನಿಯೋಗವಿದೆ.

**ವಿ.ಸೂ.: ಚುಕ್ಕಿ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸುವವರು 4 ಗಂಟೆಗೆ ಮೊದಲೇ ಅಸೋಸಿಯೇಷನ್‌ನಲ್ಲಿ ಹಾಜರಿರಬೇಕು.**



**ಸಮಸ್ತ ಕನ್ನಡ ಮನಸ್ಸುಗಳಿಗೆ**
**ವಿಜಯದಶಮಿ - ದಸರಾ ಹಬ್ಬದ**
**ಹಾರ್ದಿಕ ಶುಭಾಶಯಗಳು**

ಮೈಸೂರು ಅಸೋಸಿಯೇಶನ್

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938